# ಶಿವಳ್ಳಿ ಬ್ರಾಹ್ಮಣರು

(ಚಾರಿತ್ರಿಕ, ಸಾಮಾಜಿಕ, ಸಾಹಿತ್ಯದೃಷ್ಟಿಕೋನಗಳ ಪ್ರಬಂಧ ಸಂಕಲನ)

ಸಂಪಾದಕರು

ಎಚ್. ಬಿ. ಎಲ್. ರಾವ್, ಮುಂಬಯಿ

ಸಲಹಾ ಸಮಿತಿ

ಪ್ರೊ| ಪಿ. ಶ್ರೀಪತಿ ತಂತ್ರಿ

ಡಾ| ಕೆ. ಪದ್ಮನಾಭ ಕೇಕುಣ್ಣಾಯ

ಶ್ರೀ ಪಿ. ಶ್ರೀನಿವಾಸ ಭಟ್, ಕಟೀಲು

ಪ್ರಕಾಶನ

ಶಿವಳ್ಳಿ ಪ್ರತಿಷ್ಠಾನ, ಮುಂಬಯಿ

2001

**Shivalli Brāhmaṇaru** : Collection of articles on Shivalli Brahmins containing historical, social and literary aspects. Written by different authors. Edited by H.B.L. Rao. Published by Shivalli Pratishthana, Mumbai.

First Edition : 2001

Pages : ೧೬ + 368

© Reserved.

Price : **Rs. 250/-**

ಮುಖಪುಟ ವಿನ್ಯಾಸ : ಶ್ರೀ ನಾಗರಾಜ ಆಚಾರ್ಯ, ಮಣಿಪಾಲ

ಮುಖಪುಟ ಚಿತ್ರಸೂಚನೆ: ಬ್ರಾಹ್ಮಣರ ನಿತ್ಯಾನುಷ್ಠಾನದ ಸಂಧ್ಯಾವಂದನೆಯಲ್ಲಿ ಬಹುಮುಖ್ಯವಾದ ಸೂರ್ಯಾರ್ಘ್ಯಪ್ರದಾನ.

ಅಕ್ಷರಸಂಯೋಜನೆ :
'ನವದುರ್ಗಾ ಲೇಸರ್‌ಟೆಕ್', C/o. ಶ್ರೀಮತಿ ಸ್ವರ್ಣಲತಾ ಕೇಕುಣ್ಣಾಯ, ಉಡುಪಿ-೨
[Ph. 31159]
ಮುದ್ರಣ :
ಮಣಿಪಾಲ್ ಪ್ರೆಸ್ ಪ್ರೈವೇಟ್ ಲಿಮಿಟೆಡ್, ಮಣಿಪಾಲ.

# ಗ್ರಾಮಪದ್ಧತಿ ಮತ್ತು ತೌಳವ ಬ್ರಾಹ್ಮಣ ಇತಿಹಾಸ

● ನಾಗೇಂದ್ರ ರಾವ್, ಉಡುಪಿ.

'ಗ್ರಾಮಪದ್ಧತಿ' ತೌಳವ ಬ್ರಾಹ್ಮಣ ಸ್ಥಳಗಳ, ಕುಲಗಳ ಇತಿಹಾಸವನ್ನು ಹೇಳುವ ಒಂದು ಪ್ರಾಚೀನ ಗ್ರಂಥ. ಈ ಗ್ರಂಥದ ವಿವಿಧ ಪ್ರತಿಗಳಿವೆ. ಸಾಧಾರಣವಾಗಿ ಇದರ ಪ್ರತಿಗಳು ಕನ್ನಡದಲ್ಲಿ ಲಭ್ಯವಿವೆ; ಆದರೆ ಸಂಸ್ಕೃತ ಭಾಷೆಯಲ್ಲಿ ಬಂದ ಪ್ರತಿಗಳೂ ದೊರೆಯುತ್ತವೆ. ಇದನ್ನು ಬರೆಯಲು ಕೆಲವೊಮ್ಮೆ ತುಳುಲಿಪಿಯನ್ನು ಬಳಸಿದುದನ್ನು ಕಾಣಬಹುದು.

ಪ್ರಸ್ತುತ ಅಧ್ಯಯನವು 'ಗ್ರಾಮಪದ್ಧತಿ'ಯ ಮೂರು ಪ್ರತಿಗಳ ಆಧಾರದ ಮೇಲೆ ಮಾಡಲ್ಪಟ್ಟುದು. ಮೊದಲ ಪ್ರತಿಯನ್ನು ೧೯೨೪ರಲ್ಲಿ ಹೊಳ್ಳ ಕೃಷ್ಣಯ್ಯನವರು ಬಲನಾಡುವಿನಲ್ಲಿ ಪ್ರಕಟಿಸಿದರು. ಎರಡನೇ ಪ್ರತಿ ಅಪ್ರಕಟಿತವಾಗಿದ್ದು ಇದು ಜರ್ಮನಿಯ ಟ್ಯುಬಿಂಜನ್ ವಿಶ್ವವಿದ್ಯಾಲಯದಲ್ಲಿದೆ.[೧] ಮೂರನೆಯ ಪ್ರತಿಯು ಮಂಗಳೂರು ವಿಶ್ವವಿದ್ಯಾಲಯದ 'ದಕ್ಷಿಣ ಕನ್ನಡ ವಿಭಾಗ' ಗ್ರಂಥಾಲಯದಲ್ಲಿ ದೊರಕಿತು. (ಪ್ರತಿ ಸಂ. ೭೯) (ಅಧ್ಯಯನದ ಉದ್ದೇಶಕ್ಕಾಗಿ ಈ ಮೂರು ಪ್ರತಿಗಳನ್ನು ಗ್ರಾ1 ಗ್ರಾ2 ಗ್ರಾ3 ಎಂದು ಕರೆಯಲಾಗಿದೆ.)

ಇಲ್ಲಿ ಗ್ರಾಮ ಪದ್ಧತಿಯ ಕೆಲವು ಇತರ ಪ್ರತಿಗಳೂ ದೊರೆಯುತ್ತವೆ:

೧. ಸಂಖ್ಯೆ ೪೪ ನಂದಿನಾಗರಿ ಲಿಪಿಯಲ್ಲಿ, 'ಗ್ರಾಮಪದ್ಧತಿಯ ಕೆಲವು ಮನೆತನಗಳು'.

೨. ಸಂಖ್ಯೆ ೭೮ 'ಗ್ರಾಮಪದ್ಧತಿ'.

೩. ಸಂಖ್ಯೆ ೫೯ ವ್ಯಾಸ, ಇತ್ಯಾದಿ ಬರೆದಿರುವ ಸಹ್ಯಾದ್ರಿ ಖಂಡ ಮತ್ತು ಇತರ ವಿಷಯಗಳು.

(ಈ ಗ್ರಂಥಾಲಯದ ತಾಳೆಗರಿ ಪುಸ್ತಕಗಳನ್ನು ಪರಿಶೀಲಿಸಿ ಅವುಗಳ ಪಟ್ಟಿಯನ್ನು ತಯಾರಿಸಿದವರು ಶ್ರೀ ಎಂ. ರಾಜಗೋಪಾಲಾಚಾರ್ಯ, ಉಡುಪಿ.)

ಗ್ರಾಮಪದ್ಧತಿಯ ಕೆಲವು ಪ್ರತಿಗಳನ್ನು ಪ್ರಾಚೀನ ಸಂಪ್ರದಾಯಗಳನ್ನು ಅನುಸರಿಸುವ ಮನೆತನಗಳಲ್ಲಿ ಕೂಡ ಕಾಣಬಹುದು. ಈ ಲೇಖಕನಿಗೆ ಅಂತಹ ಕೆಲವು ಗ್ರಂಥಗಳು ಇರುವ ಮನೆಗಳ ಸಂದರ್ಶನ ಮಾಡುವ ಅವಕಾಶ ದೊರಕಿತು:

---

೧. ಬಾಸೆಲ್ ಮಿಶನರಿಯವರ ಸಂಗ್ರಹದಲ್ಲಿದ್ದ ಈ ಪ್ರತಿಯ ಛಾಯಾಪ್ರತಿಯನ್ನು ನನಗೆ ಒದಗಿಸಿಕೊಟ್ಟ ಪ್ರೊ| ಬಿ.ಎ.ವಿವೇಕ ರೈ, ಕನ್ನಡ ವಿಭಾಗ, ಮಂಗಳೂರು ವಿಶ್ವವಿದ್ಯಾಲಯ.

೧. ಕೆಮ್ಮಿಂಜೆ ಕೇಶವ ತಂತ್ರಿ

೨. ಹರಿಕೃಷ್ಣ ತಂತ್ರಿ, ಉಡುಪಿ

೩. ರಾಮ ಬಲ್ಲಾಳ್, ಮಂಜನಾಡಿ.

ಧಾರ್ಮಿಕ ಸಂಸ್ಥೆಗಳಾದ ಮಠಗಳಲ್ಲಿ ಕೂಡ ಗ್ರಾಮಪದ್ಧತಿಯ ಪ್ರತಿಗಳನ್ನು ಕಾಣಬಹುದಾಗಿದೆ. ಬಾಳೆಕುದುರು ಮಠದಲ್ಲಿದ್ದ ಗ್ರಾಮಪದ್ಧತಿಯ ಪ್ರತಿ ಈಗ ಧರ್ಮಸ್ಥಳ ತಾಳೆಗರಿ ಗ್ರಂಥಾಲಯದಲ್ಲಿದೆ.

ಗ್ರಾಮಪದ್ಧತಿ ಯಾವ ಕಾಲದಲ್ಲಿ ಬರೆಯಲ್ಪಟ್ಟಿತೆಂದು ನಿಖರವಾಗಿ ಹೇಳಲು ಯಾವುದೇ ಆಧಾರ ದೊರೆತಿಲ್ಲ. ಅದರ ಬೇರೆ ಬೇರೆ ಆವೃತ್ತಿಗಳು ಹಾಗೂ ಪ್ರತಿಗಳು ಬೇರೆ ಬೇರೆ ಕಾಲಘಟ್ಟಗಳಲ್ಲಿ ನಿರ್ಮಾಣಗೊಂಡಂತೆ ಕಂಡುಬರುತ್ತದೆ. ಆರಂಭದಲ್ಲಿ ಮೌಖಿಕ ರೂಪದಲ್ಲಿದ್ದು, ಸುಮಾರು ೧೫ನೇ ಶತಮಾನದಲ್ಲಿ ಇದನ್ನು ಬರವಣಿಗೆಯ ರೂಪಕ್ಕೆ ಇಳಿಸಲಾಯಿತೆಂದು ವಿದ್ವಾಂಸರುಗಳಾದ ಡಾ। ಗುರುರಾಜ ಭಟ್ಟ ('ತುಳುನಾಡು', 'Studies in Tuluva History and Culture') ಹಾಗೂ ಡಾ। ಬಿ. ಎ. ಸಾಲೆತ್ತೂರು 'Ancient Karnataka, Vol I, History of Tuluva' ಅಭಿಪ್ರಾಯಪಟ್ಟಿದ್ದಾರೆ. ಅಂದಮಾತ್ರಕ್ಕೆ ಗ್ರಾಮಪದ್ಧತಿಯ ಎಲ್ಲಾ ಆವೃತ್ತಿಗಳು ಮತ್ತು ಪ್ರತಿಗಳು ೧೫ನೇ ಶತಮಾನದಲ್ಲಿ ಬರೆಯಲ್ಪಟ್ಟವೆ ಎಂದು ಅರ್ಥವಲ್ಲ. ಕೆಲವು ಆವೃತ್ತಿ ಅಥವಾ ಪ್ರತಿಗಳು ೧೭–೧೮ನೇ ಶತಮಾನಗಳಲ್ಲಿ ಕೂಡ ಬರೆಯಲ್ಪಟ್ಟಿರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಅರ್ವಾಚೀನ ಪ್ರತಿಗಳಲ್ಲಿ ಮೂಲಗ್ರಂಥದಲ್ಲಿದ್ದ ಸಂಸ್ಕೃತ ಶ್ಲೋಕಗಳನ್ನು ಆ ಶ್ಲೋಕಗಳ ಜತೆಗೆ ಗದ್ಯರೂಪದಲ್ಲಿ ಕನ್ನಡ ಭಾಷೆಗೆ ಅನುವಾದ ಮಾಡಿರುವುದನ್ನು ಕಾಣಬಹುದು.

ಕೆಲವು ಇತಿಹಾಸಕಾರರು ಪ್ರಸ್ತುತ ಇತಿಹಾಸಶಾಸ್ತ್ರದ ನಿಯಮಗಳನ್ನನುಸರಿಸಿ ಈ ಗ್ರಂಥವನ್ನು ಸಂಶಯದೃಷ್ಟಿಯಿಂದ ನೋಡಿದ್ದಾರೆ (ಕೆ.ವಿ. ರಮೇಶ –History of South Kanara). ಆದರೆ ತುಳುನಾಡಿನ ಇತಿಹಾಸವನ್ನು ಆಧುನಿಕ ವಿಧಾನದಿಂದಲೇ ಸಂಶೋಧಿಸಿದ ಇತಿಹಾಸಕಾರ ಡಾ। ಬಿ. ಎ. ಸಾಲೆತ್ತೂರರು ಈ ಗ್ರಂಥದಲ್ಲಿರುವ ಸತ್ಯಾಂಶಗಳನ್ನು ಅವಗಣಿಸಲಾಗದು ಎಂದಿದ್ದಾರೆ. ಅವರ ಪ್ರಕಾರ ತುಳುನಾಡಿನ ಹಾಗೂ ತೌಳವ ಬ್ರಾಹ್ಮಣರ 'ಸಾಮಾಜಿಕ ಇತಿಹಾಸ'ದ ದೃಷ್ಟಿಯಲ್ಲಿ ಗ್ರಾಮಪದ್ಧತಿ ಪ್ರಾಮುಖ್ಯವನ್ನು ಪಡೆಯುತ್ತದೆ. ಗ್ರಂಥದಲ್ಲಿ ಕೆಲವು ದೋಷಗಳನ್ನು ಕಾಣಬಹುದಾದರೂ ತೌಳವ ಬ್ರಾಹ್ಮಣರ ಪರಂಪರಾಗತ ಸಾಮಾಜಿಕ ಹಾಗೂ ಸಾಂಸ್ಕೃತಿಕ ಜೀವನದ ಕೆಲವು ಮಹತ್ವದ ವಿವರಗಳು ಸಿಕ್ಕುವುದು ಈ ಗ್ರಂಥದಲ್ಲಿ ಮಾತ್ರ. ಗ್ರಾಮಪದ್ಧತಿಯ ವಿವಿಧ ಆವೃತ್ತಿ ಹಾಗೂ ಪ್ರತಿಗಳ ತೌಲನಿಕ ಅಧ್ಯಯನ ಮಾಡಿದರೆ ತೌಳವ ಬ್ರಾಹ್ಮಣರ ಇತಿಹಾಸದ ಹಲವು ವಿವರಗಳನ್ನು ಇನ್ನಷ್ಟು ಸ್ಪಷ್ಟವಾಗಿ ಇನ್ನಷ್ಟು ವ್ಯಾಪಕವಾಗಿ ತಿಳಿಯಲು ಸಾಧ್ಯವಾಗಬಹುದು.

ಈ ಗ್ರಂಥದ ಎಲ್ಲ ಆವೃತ್ತಿಗಳು ಮತ್ತು ಪ್ರತಿಗಳು ತೌಳವ ಬ್ರಾಹ್ಮಣ ಪಂಗಡಗಳ ಕುರಿತು ಸರ್ವಸಾಮಾನ್ಯವಾಗಿದ್ದ ಕೆಲವು ಐತಿಹ್ಯಗಳನ್ನು ನಿರ್ದಿಷ್ಟ ಆಖ್ಯಾಯಿಕೆಗಳ ರೂಪದಲ್ಲಿ ನಿರೂಪಿಸುತ್ತವೆ:

೧. ಪರಶುರಾಮಋಷಿಯು ಭಾರತದೇಶದ ಪಶ್ಚಿಮ ಕರಾವಳಿ ಪ್ರದೇಶವನ್ನು ಸೃಷ್ಟಿಸಿದ ಕಥೆ.

೨. ಕದಂಬವಂಶದ ರಾಜ ಮಯೂರವರ್ಮ ಮತ್ತು ಅವನ ಮಗ ಚಂದ್ರಾಂಗದ ವರ್ಮ ಹಾಗೂ ಮೊಮ್ಮಗ ಲೋಕಾದಿತ್ಯನು ಅಹಿಚ್ಛತ್ರದಿಂದ ತುಳುನಾಡಿಗೆ ಬ್ರಾಹ್ಮಣರನ್ನು ಕರೆತಂದ ವೃತ್ತಾಂತ.

೩. ಆ ಬ್ರಾಹ್ಮಣರು ಆರಂಭದಲ್ಲಿ ವಾಸವಾಗಿದ್ದ ತುಳುನಾಡಿನ ೩೨ ಗ್ರಾಮಗಳು ಮತ್ತು ಆಯಾ ಗ್ರಾಮದಲ್ಲಿದ್ದ ಬ್ರಾಹ್ಮಣ ಕುಲಗಳ ವಿವರ.

ಮೊದಲ ಭಾಗದಲ್ಲಿ ದಂತಕಥೆಗಳ ರೂಪದಲ್ಲಿ ಆಗಿನ ಕಾಲದ ದಕ್ಷಿಣ ಕನ್ನಡದಲ್ಲಿ ರಾಜ್ಯದ ಉಗಮದ ಕುರಿತು ಹಾಗೂ ಬ್ರಾಹ್ಮಣರ ವಸತಿಗಳ ನಿರ್ಮಾಣದ ಕುರಿತು ಕೆಲವು ಹೇಳಿಕೆಗಳಿವೆ. ಪರಶುರಾಮನು ಭೂಮಿಯನ್ನು ಸೃಷ್ಟಿಸಿದ ಬಗೆಗೆ ನಿರೂಪಣೆ ಇದೆ. ಈ ನಿರೂಪಣೆಯಲ್ಲಿ ಪರಶುರಾಮನು ಇದು 'ಅಬ್ರಾಹ್ಮಣ್ಯ'ದೇಶವಾದ್ದರಿಂದ ಉತ್ತರದಿಂದ ಬ್ರಾಹ್ಮಣರು ಈ ಪ್ರದೇಶಕ್ಕೆ ಬರಲೊಪ್ಪದ ಕಾರಣ, ಈ ಪ್ರದೇಶದಲ್ಲಿ ಮೊದಲೇ ನೆಲೆಸಿದ್ದ ಮೊಗೇರ ಜನಾಂಗದವರನ್ನು ಬ್ರಾಹ್ಮಣೀಕರಣಗೊಳಿಸುತ್ತಾನೆ. ಹಾಗೂ ಅವರಿಗೆ ಬ್ರಾಹ್ಮಣರಿಗೆ ಸಿಕ್ಕಬೇಕಾದ ಸ್ಥಾನಮಾನಗಳನ್ನು ಕೊಡುವ ಬಗ್ಗೆ ಭರವಸೆ ನೀಡುತ್ತಾನೆ. ಇದೇ ಭಾಗದಲ್ಲಿ ತ್ರಿನೇತ್ರ ಕದಂಬನ ಜನನದ ಕುರಿತು ಕಥೆ ನಿರೂಪಿಸಲ್ಪಟ್ಟಿದೆ. ಹಾಗೂ ಈ ದೇಶವನ್ನು ಆಳಿದ ವಿವಿಧ ರಾಜರುಗಳ ಪಟ್ಟಿ ಇದೆ.

ಎರಡನೆಯ ಭಾಗದಲ್ಲಿ ಕೆಲವು ರಾಜರುಗಳ ಕುರಿತು ಹಾಗೂ ಆ ರಾಜರುಗಳ ವಿರುದ್ಧ ನಡೆದ ಕೆಲವು ಬ್ರಾಹ್ಮಣ ಹಾಗೂ ಅಬ್ರಾಹ್ಮಣ ಗುಂಪುಗಳ ದಂಗೆಗಳನ್ನು ನಿರೂಪಿಸಿದೆ. ಇಲ್ಲಿ ಪರಶುರಾಮ ಕ್ಷೇತ್ರವನ್ನು ಆಳಿದ ಮಯೂರವರ್ಮ, ಚಂದ್ರಾಂಗದ ಹಾಗೂ ಲೋಕಾದಿತ್ಯರ ಕುರಿತು ಹಾಗೂ ಅವರ ಆಳ್ವಿಕೆಯ ಕ್ರಮದ ಕುರಿತಾಗಿ ಕೆಲವು ವಿಷಯಗಳನ್ನು ಕೆಲವು ವಿಶೇಷ ಘಟನೆಗಳನ್ನು ಹೇಳಲಾಗಿದೆ. ಈ ಭಾಗದಲ್ಲಿ ಈ ಪ್ರದೇಶದ ಮೂಲನಿವಾಸಿಗಳಾದ ಚಂಡಾಲರ ರಾಜನಾದ ಹುಬ್ಬಾಸಿಗನ ದಂಗೆಯನ್ನು ವಿವರಿಸಲಾಗಿದೆ.[೨] ಇಷ್ಟು ಮಾತ್ರವಲ್ಲದೆ ಪರಶುರಾಮನಿಂದ ಮೊದಲು ಸೃಷ್ಟಿಸಲ್ಪಟ್ಟ ಬ್ರಾಹ್ಮಣರು ಕೂಡ ಮಯೂರವರ್ಮ ಅಹಿಚ್ಛತ್ರದಿಂದ ಬ್ರಾಹ್ಮಣರನ್ನು ಕರೆತರುತ್ತೇನೆ ಎಂದು ನಿಶ್ಚಯಿಸಿದಾಗ, ಈ ಬ್ರಾಹ್ಮಣರು ತಮ್ಮ ಹಳೆಯ ಸ್ಥಾನಮಾನವನ್ನು ಕಳೆದುಕೊಂಡೆವು ಎಂಬ ಕೋಪದಿಂದ ಮಯೂರವರ್ಮನ ವಿರುದ್ಧ ದಂಗೆ ಎದ್ದಾಗ ಮಯೂರವರ್ಮ ಅವರನ್ನು ಸಮಾಧಾನ

೨. ಹುಬ್ಬಾಸಿಗನ ದಂಗೆಯ ಕುರಿತು ಇರುವ ಸಾಂಪ್ರದಾಯಿಕ ವಿಷಯಗಳಿಗೆ ನೋಡಿ: ಪುರುಷೋತ್ತಮ ಬಿಳಿಮಲೆ, 'ಕೊರಗರ ಸಂಸ್ಕೃತಿ, ಬೆಂಗಳೂರು, ೧೯೯೩, ಪು. ೨೯-೩೩)

ಪಡೆಯುತ್ತಾನೆ. ಈ ಭಾಗದಲ್ಲಿ ಈ ಗ್ರಂಥವನ್ನು ರಚಿಸಿದಾತ ದಕ್ಷಿಣ ಕನ್ನಡದಲ್ಲಿದ್ದ ಮಾತೃಪ್ರಧಾನ ಸಮಾಜದಿಂದ ಪ್ರಭಾವಿತನಾಗಿದ್ದಾನೆ ಎಂದು ಹೇಳಬಹುದು. ಕದಂಬ ರಾಜನಾದ ಮಯೂರವರ್ಮನ ತಾಯಿ ಕದಂಬ ರಾಜಕುಮಾರಿ ಸುಶೀಲಾ ಹಾಗೂ ಆತನ ತಂದೆ ಸೂರ್ಯವಂಶದ ಹೇಮಾಂಗರಾಯ. ಮಯೂರವರ್ಮ ತನ್ನ ತಂದೆಯ ವಂಶದ ಬದಲು ತನ್ನ ತಾಯಿಯ ಕುಲವಾದ ಕದಂಬಮನೆತನಕ್ಕೆ ಸೇರಿದವನಾಗಿದ್ದಾನೆ. ಇದೇ ಕಾರಣದಿಂದ ಈ ಗ್ರಂಥದ ಮುಂದಿನ ಭಾಗದಲ್ಲಿ ಮಯೂರವರ್ಮ ತನ್ನ ದೇಶದಲ್ಲಿ ಎಲ್ಲರೂ 'ದೌಹಿತ್ರಧರ್ಮ'ವನ್ನು ಪರಿಪಾಲಿಸ ಬೇಕೆಂದು ಆದೇಶ ನೀಡುತ್ತಾನೆ.

ಈ ಗ್ರಂಥದ ಮೂರನೇ ಭಾಗದಲ್ಲಿ ಮಯೂರವರ್ಮ ಬ್ರಾಹ್ಮಣರಿಗೆ ನೀಡಿದ ೩೨ ಗ್ರಾಮಗಳ ಕುರಿತು ವಿವರಣೆ ಇದೆ. ಈ ಗ್ರಾಮಗಳಲ್ಲಿ ಯಾವ ಬ್ರಾಹ್ಮಣ ಕುಲಗಳು ನೆಲಸಿದವು ಹಾಗೂ ಪ್ರತಿಯೊಂದು ಬ್ರಾಹ್ಮಣ ಕುಲ ನಿರ್ವಹಿಸಬೇಕಾದ ಕರ್ತವ್ಯಗಳ ಬಗ್ಗೆ ವಿವರವಿದೆ. ಈ ಮೂವತ್ತೆರಡು ಗ್ರಾಮಗಳು ಇರುವುದನ್ನು ಈಗಲೂ ಗುರುತಿಸಬಹುದು ಹಾಗೂ ಈ ಗ್ರಾಮಗಳಲ್ಲಿ ವಾಸಿಸುತ್ತಿದ್ದ ವಿವಿಧ ಬ್ರಾಹ್ಮಣ ಕುಲಗಳನ್ನು ಅಥವಾ ಅವುಗಳು ಅನುಸರಿಸುತ್ತಿದ್ದ ಸಂಪ್ರದಾಯಗಳು ಅಲ್ಲಿಯ ದೇವಸ್ಥಾನಗಳ ಮೂಲಕ ಮುಂದುವರಿದಿರುವುದನ್ನು ಇಂದಿಗೂ ಕಾಣಬಹುದು. ಆಗಿನ ಸಮಾಜದ ಗ್ರಾಮೀಣ ಇತಿಹಾಸವನ್ನು ಬರೆಯಲು ಈ ಗ್ರಂಥ ಸಹಕಾರಿಯಾಗುವುದು ಎಂದರೆ ತಪ್ಪಾಗಲಾರದು. ಈಗ ಗ್ರಾಮಪದ್ಧತಿಯಲ್ಲಿರುವ ಕೆಲವು ಘಟನೆಗಳ ಕುರಿತು ದೃಷ್ಟಿ ಹಾಯಿಸೋಣ.

ಪರಶುರಾಮ ೨೧ ಬಾರಿ ಕ್ಷತ್ರಿಯ ಸಮಾಜವನ್ನು ನಿರ್ನಾಮ ಮಾಡಿದ ಬಳಿಕ ತನ್ನ ಈ ಪಾಪದ ಪ್ರಾಯಶ್ಚಿತ್ತವಾಗಿ ಕ್ಷತ್ರಿಯರಿಂದ ತಾನು ಗೆದ್ದ ಭೂಮಿಯೆಲ್ಲವನ್ನೂ ಕಾಶ್ಯಪನಿಗೆ ಧಾರೆಯೆರೆಯುತ್ತಾನೆ. ಕಾಶ್ಯಪ ಬೇರೆಯವರಿಗೆ ದಾನ ಮಾಡಿದ ಭೂಮಿಯಲ್ಲಿ ನೆಲೆ ನಿಂತರೆ ದತ್ತಾಪಹಾರ ದೋಷ ಬರುವುದು ಎಂದಾಗ ಪರಶುರಾಮನು ಸಹ್ಯಪರ್ವತಕ್ಕೆ ಬಂದು ಪಶ್ಚಿಮ ಕರಾವಳಿಯಲ್ಲಿ ಹೊಸ ಪ್ರದೇಶವನ್ನು ಸೃಷ್ಟಿಸುತ್ತಾನೆ. ಹೊಸದಾಗಿ ಸೃಷ್ಟಿಸಿದ ಈ ಭೂಮಿಯಲ್ಲಿ ಬ್ರಾಹ್ಮಣರಿರುವುದಿಲ್ಲ ಹಾಗೂ ಅಬ್ರಾಹ್ಮಣ್ಯವಾದ ಈ ದೇಶಕ್ಕೆ ಬರಲು ಬೇರೆ ಪ್ರದೇಶದ ಬ್ರಾಹ್ಮಣರು ಒಪ್ಪುವುದಿಲ್ಲ. ಇದರಿಂದ ಕೋಪಗೊಂಡ ಪರಶುರಾಮ ಈ ಪ್ರದೇಶದಲ್ಲಿ ಮೊದಲಿನಿಂದ ವಾಸಿಸುತ್ತಿದ್ದ ದಾಸ-ರೇವರ-ಕೈವರ್ತರನ್ನು ಬ್ರಾಹ್ಮಣೀಕರಣಗೊಳಿಸುತ್ತಾನೆ. ಹಾಗೂ ಬ್ರಾಹ್ಮಣರಿಗೆ ಎಲ್ಲ ಸವಲತ್ತುಗಳನ್ನೂ ಅವರಿಗೆ ಅನುಗ್ರಹಿಸುತ್ತಾನೆ. ಈ ಬ್ರಾಹ್ಮಣರಿಗೆ ಏನಾದರೂ ಕಷ್ಟವಾದರೆ ಕೂಡಲೇ ತನ್ನ ಹೆಸರನ್ನು ಕರೆಯಬೇಕೆಂದೂ ಆಗ ತಾನು ಪ್ರತ್ಯಕ್ಷನಾಗಿ ಅವರ ಕಷ್ಟವೆಲ್ಲವನ್ನೂ ನಿವಾರಿಸುತ್ತೇನೆಂದೂ ಭರವಸೆ ನೀಡುತ್ತಾನೆ. ಹೀಗೆ ಹೇಳಿ ಪರಶುರಾಮ ಮಹೇಂದ್ರ ಪರ್ವತಕ್ಕೆ ತಪಸ್ಸಿಗೆಂದು ತೆರಳುತ್ತಾನೆ. ಪರಶುರಾಮನ ಮಾತನ್ನು ಪರೀಕ್ಷಿಸಬೇಕೆಂಬ ಕುತೂಹಲದಿಂದ ಬ್ರಾಹ್ಮಣರು ರಾಮ ಎಂದು ಕರೆಯುತ್ತಾರೆ. ಪರಶುರಾಮನು ಕೂಡಲೇ

ಪ್ರತ್ಯಕ್ಷನಾದಾಗ ನಿಜಸಂಗತಿ ಅರಿತು ಕೋಪಗೊಂಡು ನೀವು ಶೂದ್ರಪ್ರಾಯ ರಾಗಿರುವಿರಿ ಎಂದು ಶಪಿಸುತ್ತಾನೆ.

ಮುಂದಿನ ಭಾಗದಲ್ಲಿ ಕದಂಬನ ಹುಟ್ಟಿನ ಕುರಿತು ನಿರೂಪಣೆ ಇದೆ. ಶಿವ ಮತ್ತು ಪಾರ್ವತಿಯರು ಸಹ್ಯಪರ್ವತಕ್ಕೆಂದು ಬಂದಾಗ ಅಲ್ಲಿ ಕದಂಬನ ಜನನವಾಗುತ್ತದೆ. ಕದಂಬ ವೃಕ್ಷದ ಕೆಳಗೆ ಜನನವಾದ ಕಾರಣ ಆತನಿಗೆ ಕದಂಬನೆಂದು ಹೆಸರಿಡಲಾಯಿತು. ಹಾಗೂ ಆತ ರಾಜನಾಗಬೇಕೆಂಬ ಆಶೀರ್ವಾದ ಆತನಿಗೆ ದೊರೆಯುತ್ತದೆ. ಆತನ ಅನಂತರ ವಸು ಚಕ್ರವರ್ತಿ ರಾಜ್ಯವಾಳುತ್ತಾನೆ ಹಾಗೂ ಆತನ ಮಗಳಾದ ಸುಶೀಲಾ ಸೂರ್ಯವಂಶದ ಹೇಮಾಂಗರಾಯನನ್ನು ಮದುವೆ ಯಾಗುತ್ತಾಳೆ ಮತ್ತು ಇವರಿಗೆ ಮಯೂರವರ್ಮ ಜನಿಸುತ್ತಾನೆ. ಮಯೂರವರ್ಮ ರಾಜನಾದಾಗ ಋಷಿಗಳು ಆತನಿಗೆ ಗೋದಾವರೀತೀರದಲ್ಲಿರುವ ಅಹಿಚ್ಛತ್ರದಿಂದ ಬ್ರಾಹ್ಮಣರನ್ನು ಕರೆತರಬೇಕೆಂಬ ಸಲಹೆ ನೀಡುತ್ತಾರೆ. ಹಾಗೂ ಅವರ ಸಲಹೆಯಂತೆ ಮಯೂರವರ್ಮ ಬ್ರಾಹ್ಮಣರನ್ನು ಕರೆತರುತ್ತಾನೆ. ಇದಕ್ಕೂ ಮೊದಲು ಪರಶುರಾಮ ಈ ಪ್ರದೇಶವನ್ನು ಈ ಕೆಳಗಿನ ಭಾಗಗಳಾಗಿ ವಿಂಗಡಿಸಿರುತ್ತಾನೆ:

(೧) ಕರಾಟ, (೨) ವರಾಟ, (೩) ಮರಾಟ, (೪) ಕೊಂಕಣ, (೫) ಹೈವ, (೬) ತೌಳವ, (೭) ಕೇರಳ. ಮಯೂರವರ್ಮನಿಂದ ಕರೆಸಲ್ಪಟ್ಟ ಬ್ರಾಹ್ಮಣರು ಹೈವ, ತೌಳವ ಹಾಗೂ ಕೇರಳದ ವಿವಿಧ ಗ್ರಾಮಗಳಲ್ಲಿ ನೆಲೆಸಲ್ಪಡುತ್ತಾರೆ. ಈ ಬ್ರಾಹ್ಮಣರು ಹೈವದ ೧೮ ಗ್ರಾಮಗಳಲ್ಲಿ, ತೌಳವರ ೩೨ ಗ್ರಾಮಗಳಲ್ಲಿ ಹಾಗೂ ಕೇರಳದ ೬೪ ಗ್ರಾಮಗಳಲ್ಲಿ ನೆಲಸುತ್ತಾರೆ.

ಬ್ರಾಹ್ಮಣರಿಗಾಗಿ ಕೆಲಸ ಮಾಡಲೆಂದು ಅವರ ಜೊತೆಗೆ ಕೆಲವು ಶೂದ್ರರನ್ನು ಕರೆತಂದಿರುತ್ತಾರೆ. ಶೂದ್ರರಿಗೆ ನಾಯರರು ಎಂಬ ಹೆಸರಿಡುತ್ತಾರೆ. ನಾಯರರು ಬ್ರಾಹ್ಮಣರ ಹತೋಟಿಯಲ್ಲಿರಬೇಕು. ಈ ರೀತಿಯ ಹೊಸದಾದ ಬ್ರಾಹ್ಮಣ ಸಮಾಜದ ನಿರ್ಮಾಣದ ಸಮಯದಲ್ಲಿ ಈ ಪ್ರದೇಶದಲ್ಲಿ ಹಳೆಯ ಪತಿತ ಬ್ರಾಹ್ಮಣರು ಇದರ ವಿರುದ್ಧ ಪ್ರತಿಭಟಿಸುತ್ತಾರೆ. ಮಯೂರವರ್ಮ ಅವರನ್ನು ಶಿಕ್ಷಿಸುವ ಬದಲಾಗಿ 'ಸಂಕೇತ ಪದ್ಧತಿ'ಯನ್ನು ಆರಂಭಿಸುತ್ತಾನೆ. ಇದರ ಪ್ರಕಾರ ಈ ಬ್ರಾಹ್ಮಣರಿಗೆ ಈ ಕೆಳಗಿನ ಗ್ರಾಮಗಳನ್ನು ನೀಡಲಾಯಿತು. (೧) ನಾಗೂರು ಗ್ರಾಮ, (೨) ಮಟ್ಟಿನ ಗ್ರಾಮ, (೩) ಕುಶಸ್ಥಳಿ ಗ್ರಾಮ, (೪) ಸ್ವಾಷ್ಟಿ ಗ್ರಾಮ. ಈ ಬ್ರಾಹ್ಮಣರಿಗೆ ಅವರವರ ಗ್ರಾಮದ ಹೆಸರನ್ನೇ ನೀಡಲಾಯಿತು.

ಶೂದ್ರರು ಬ್ರಾಹ್ಮಣರಿಗೆ ಸಹಕಾರ ನೀಡಬೇಕೆಂಬ ಉದ್ದೇಶದಿಂದ ಮಯೂರ ವರ್ಮ ಎರಡು 'ದೇಶ'ವನ್ನು ಶೂದ್ರರಿಗೆ ಕೊಡುತ್ತಾನೆ. ಈ ನಾಡುಗಳಲ್ಲಿ

೩. ಡಾ॥ ಪಿ. ಗುರುರಾಜ ಭಟ್ಟರ ಪ್ರಕಾರ ಈ ನಾಲ್ಕು ನಾಡುಗಳಲ್ಲಿ ಮೂರು ನಾಡುಗಳ ಉಲ್ಲೇಖ ಶಾಸನಗಳಲ್ಲಿ ದೊರೆಯುತ್ತದೆ. ನೋಡಿ: ಗುರುರಾಜ ಭಟ್ಟ- Studies in Tuluva History and Culture.

ನೆಲೆಸಿದವರನ್ನು 'ನಾಡವ'ರೆಂದು ಕರೆಯಲಾಗುತ್ತದೆ. ಈ ನಾಡುಗಳನ್ನು ಈ ಕೆಳಗಿನಂತೆ ವಿಭಾಗಿಸಲಾಯಿತು:

ಕೆಲನಾಡು–ನಲವತ್ತನಾಡು–ಹಲಸನಾಡು–ಯಡಡುನಾಡು.[೩] ಬ್ರಾಹ್ಮಣರು ತಮ್ಮ ಅಗ್ರಹಾರಗಳಲ್ಲಿ ಈ ವೇದಾಧ್ಯಯನ, ಈಶ್ವರ ಪೂಜೆ, ಮಹಾವಿಷ್ಣು ಪೂಜೆ ಹಾಗೂ ಮಹಾಗಣಪತಿ ಆರಾಧನೆ ಮಾಡಬೇಕು.

ಈ ಸಮಯದಲ್ಲಿ ಮಯೂರವರ್ಮನಿಗೆ ಚಂದ್ರಾಂಗದನೆಂಬ ಮಗ ಜನಿಸುವಾಗ, ಮಯೂರವರ್ಮ ತಪಸ್ಸಿಗೆ ರಾಜ್ಯತ್ಯಾಗ ಮಾಡಿ ಕಾಡಿಗೆ ತೆರಳುತ್ತಾನೆ. ರಾಜನ ಪ್ರೋತ್ಸಾಹ ಇಲ್ಲವೆಂದು ಹೇಳಿ ಮಯೂರವರ್ಮನಿಂದ ಕರೆತರಲ್ಪಟ್ಟ ಎಲ್ಲ ಬ್ರಾಹ್ಮಣರೂ ಅಹಿಚ್ಛತ್ರಕ್ಕೆ ತೆರಳಿದರು. ಚಂದ್ರಾಂಗದ ಪ್ರಾಯಕ್ಕೆ ಬಂದಾಗ ಈ ವಿಷಯವನ್ನು ತಿಳಿದು ಬ್ರಾಹ್ಮಣರನ್ನು ಪುನಃ ಕರೆತರುತ್ತಾನೆ. ಮತ್ತು ಅವರಿಗೆ ಬೇಕಾದ ಅನುಕೂಲತೆಗಳನ್ನು ಕಲ್ಪಿಸುತ್ತಾನೆ. ಆತನ ಮರಣದ ಅನಂತರ ಚಂಡಾಲ ರಾಜನಾದ ಹುಬ್ಬಾಸಿಗ ಬ್ರಾಹ್ಮಣರಿಗೆ ತೊಂದರೆ ಕೊಡಲು ಶುರು ಮಾಡಿದಾಗ ಕೆಲವು ಬ್ರಾಹ್ಮಣರು ಹಿಂಸೆ ತಡೆಯಲಾರದೆ ತಮ್ಮ ಸ್ಥಳಕ್ಕೆ ತೆರಳುತ್ತಾರೆ. ಚಂದ್ರಾಂಗದನ ಮಗ ಲೋಕಾದಿತ್ಯ ಮಯೂರವರ್ಮ ಗೋಕರ್ಣದ ಚಂಡಸೇನನ ಸಹಾಯದಿಂದ ಉಪಾಯವಾಗಿ ಹುಬ್ಬಾಸಿಗನನ್ನು ಕೊಲ್ಲುತ್ತಾನೆ. ಇದರ ಅನಂತರ ಲೋಕಾದಿತ್ಯ ಅಹಿಚ್ಛತ್ರಕ್ಕೆ ಹೋಗಿ ಅಲ್ಲಿ ಭಟ್ಟಾಚಾರ್ಯರನ್ನು ಸಂಪರ್ಕಿಸಿ ಅವರ ಮೂಲಕ ಬ್ರಾಹ್ಮಣರು ಪುನಃ ತುಳುನಾಡಿಗೆ ಬರುವಂತೆ ಮಾಡುತ್ತಾನೆ. ಇಲ್ಲಿ ಕೆಲವು ಮೂಲನಿವಾಸಿಗಳ ಜಾತಿಗಳನ್ನು ಹೆಸರಿಸಲಾಗಿದೆ:

(೧) ಬಕ್ಕ, (೨) ಬಾಕುಡ, (೩) ಮೇರ, (೪) ಗೊದ್ದಿ, (೫) ಬಳ್ಳೆ, (೬) ಹಸಳವ ಹಾಗೂ (೭) ಕೊರಗ. ಈ ಎಲ್ಲರೂ ಬ್ರಾಹ್ಮಣರಿಗೋಸ್ಕರ ಕೆಲಸ ಮಾಡಬೇಕಾಗಿತ್ತು.

ಇದೇ ಸಮಯದಲ್ಲಿ ಗೋಕರ್ಣದ ಮಹಾಬಲೇಶ್ವರನ ಸನ್ನಿಧಿಯಲ್ಲಿ ಬ್ರಾಹ್ಮಣರಿಗೆ ಭೂಮಿಯನ್ನು ದಾನ ಕೊಡುವ ಉದ್ದೇಶದಿಂದ ಒಂದು ಯಜ್ಞವನ್ನು ನೆರವೇರಿಸಲಾಯಿತು. ಭೂದಾನದ ಜೊತೆಗೆ ಕೋಟ ಗ್ರಾಮದ ಎರಡು ಬ್ರಾಹ್ಮಣರಿಗೆ ಮಹಾಬಲೇಶ್ವರದಲ್ಲಿ ಪೂಜೆ ಮಾಡುವ ಹಕ್ಕು ಹಾಗೂ ಅಲ್ಲಿಯ ತಂತ್ರಿತ್ವದ ಹಕ್ಕನ್ನು ನೀಡಲಾಯಿತು.

ಗ್ರಾಮಪದ್ಧತಿಯ ವಿವಿಧ ಪ್ರತಿಗಳು ಬ್ರಾಹ್ಮಣ ಗ್ರಾಮಗಳ ಕುರಿತು ಇನ್ನಷ್ಟು ವಿವರಗಳನ್ನು ನೀಡುತ್ತವೆ. ಈ ಗ್ರಾಮಗಳನ್ನು ೧೬ ಪಶ್ಚಿಮ ಗ್ರಾಮಗಳು ಹಾಗೂ ೧೬ ಪೂರ್ವ ಗ್ರಾಮಗಳೆಂದು ವಿಭಾಗಿಸಲಾಗಿದೆ. ಈ ಗ್ರಾಮಗಳಲ್ಲಿ ನೆಲೆಸಿದ ವಿವಿಧ ಕುಲಗಳ ಕುರಿತು ವಿವರಣೆ ಇದೆ. ಭೂಮಿಯನ್ನು ದಾನ ಮಾಡಿದ ಅನಂತರ ಲೋಕಾದಿತ್ಯ ಈ ವಿಚಾರಗಳನ್ನು ದೇಶಭಾಷೆಯಲ್ಲಿ ಬರೆಸುತ್ತಾನೆ. ಭಟ್ಟಾಚಾರ್ಯರು ಲೋಕಾದಿತ್ಯನಲ್ಲಿ 'ಶೂದ್ರ'ರು ಹಾಗೂ 'ಹೊಲೆಯ'ರನ್ನು ಬ್ರಾಹ್ಮಣರ ಅಧೀನಕ್ಕೆ ಒಳಪಡಿಸುವಂತೆ ಕೇಳಿಕೊಳ್ಳುತ್ತಾರೆ. 'ಎಲ್ಲ ಲೌಕಿಕ ಚಟುವಟಿಕೆಗಳು ನಾಯರರ

ಮೂಲಕವೇ ಆಗಬೇಕು. ಅಗ್ನಿಹೋತ್ರ, ಪಂಚಮಹಾಯಜ್ಞ ಹಾಗೂ ವೇದಾಧ್ಯಯನ ಇವುಗಳು ಬ್ರಾಹ್ಮಣರ ಕರ್ತವ್ಯಗಳು.

ಈ ರೀತಿಯ ಗ್ರಾಮಗಳ ವಿಂಗಡಣೆ ಹಾಗೂ ಕುಲಗಳ ವಿವರವಾದ ಮಾಹಿತಿಯ ನಿರೂಪಣೆಯನ್ನು 'ಸಂಕೇತಪದ್ಧತಿ' ಎಂದು ಕರೆಯಲಾಯಿತು. ಗ್ರಾಮಪದ್ಧತಿಯ ಮೊದಲ ಪ್ರತಿಯ ಕೊನೆಯ ಭಾಗದಲ್ಲಿ ಬ್ರಾಹ್ಮಣರ ಮನೆಗಳ ಸಂಪ್ರದಾಯಗಳ ನಿರೂಪಣೆ, ಬ್ರಾಹ್ಮಣ ಕುಲಗಳ ಸ್ಥಾನಮಾನ, ಅವುಗಳ ಹಕ್ಕು-ಬಾಧ್ಯತೆಗಳನ್ನು ನಿರೂಪಿಸಲಾಗಿದೆ. ಇಲ್ಲಿ ಭಟ್ಟರು, ಪ್ರಭು, ತಂತ್ರಿ, ಗ್ರಾಮಣಿ, ಅಧಿವಾಸಿ, ಪಕ್ಷನಾಥ ಮತ್ತು ಜನ್ನಿಗಳ ಕುರಿತಾಗಿ ವಿವರಣೆ ನೀಡಲಾಗಿದೆ.

ಭಟ್ಟ ಸ್ಥಾನಗಳು ೪೦, ಅಗ್ನಿಹೋತ್ರಿಗಳು ೨೪, ಸ್ಮಾರ್ತರು ೨೪, ಸಭಾಪತಿಗಳು ೨, ಪಂಡಿತರು ೨, ಪ್ರಭುಗಳು ೪, ತಂತ್ರಿಗಳು ೬, ಅಗ್ರಾಮಣಿಗಳು ೨೪, ಮಂದಿ ಅಧಿವಾಸಿಗಳು ೨೧, ಮಂದಿ ಪಕ್ಷನಾಥರು ೨, ಜನ್ನಿಗಳು ೨೮.

ಸಭಾಪತಿಗಳು: – ಶಬರಾಯ, ತಿಬುರಾಯ

ಪಂಡಿತರು: – ಕಲ್ಲುರಾಯ, ಉಪರಣ್ಣಾಯ

ತಂತ್ರಿಗಳು: – ನೇತ್ರತ್ತಾಯ, ಇಚ್ಚಲತ್ತಾಯ, ಪುತ್ರಾಯ, ಪಾಂಗಂಣಾಯ, ಉಡುಪ, ಬ್ರಹ್ಮಕಾರಂತ

ಪಕ್ಷನಾಥರು: – ಮುಡಿಲಾಯ, ನಿಡುಬೂರಾಯ

ಪ್ರಭುಗಳು: – ಚೌಟರು, ಬಂಗರು, ಮುಡಿಲಾಯ, ನಿಡುಂಬುರಾಯ

ಭಟ್ಟರು: – ಮುನ್ನೂರಾಯ, ಆರಿನಾಯ, ಕೋವಿನಾಯ, ಪೆರಣ್ಣಾಯ, ಕೊಯಮಗತ್ತಾಯ, ಕುದುರಾಯ, ಮಜ್ಜಿತ್ತಾಯ, ತಾಳತ್ತಾಯ, ಪಿಜತ್ತಾಯ, ಪಾತುರಾಯ, ಇಂದುವಳಿತ್ತಾಯ, ಕೊಯ ಕೊಡನಾಯ, ಸೀಮಂತುರಾಯ, ಪುಂಚನಾಯ, ಮುಚಿಂತೂ ರಾಯ, ಮೊಗೆರಾಯ, ಮಿತ್ರಂತಾಯ, ಅಲೆವೂರಾಯ, ತುಂಗ, ಬ್ರಹ್ಮಕಾರಂತ, ಕಲ್ಲೂರಾಯ, ಉಡುಪ, ಬೈಪಾಡಿತ್ತಾಯ, ಆತ್ರಾಡಿತ್ತಾಯ, ಅಪ್ಪಂತಾಡಿತ್ತಾಯ, ಬೆಳನ್ನಾಯ, ಅರೆಮನೆ ತ್ತಾಯ, ಇಡೆಪಾಡಿತ್ತಾಯ, ಶಬರಾಯ, ಉಪರಣ್ಣಾಯ, ಕೊರ್ಗಿನ್ನಾಯ, ಅಮೆತಾಡಿತ್ತಾಯ, ಶಂಬರಾಯ, ಕೊಳತಾಯ, ಮುಡಂಪಾಡಿತ್ತಾಯ, ಬಜಿತ್ತಾಯ, ಕೋರ್ನಾಯ, ಶಗುರಿ ತ್ತಾಯ, ಮಾಡಂತಿಲಾಯ, ಪಾತ್ತೂರಾಯ.

ಅಗ್ನಿಹೋತ್ರಿ: – ಶಿಮಂತೂರಾಯ, ಮುಚಿಂತೂರಾಯ, ಮುನ್ನೂರಾಯ, ಅಲೆವೂರಾಯ, ಕೊಡೆಂಚ, ಮಂಜೆತ್ತಾಯ, ಶರಳಾಯ, ಮಡ ಪಳಿತ್ತಾಯ, ಕಡಂಬಳಿತಾಯ, ಕುಂಜಿತಾಯ, ನಡುವಂತಿಲಾಯ, ಶಗುರಿತ್ತಾಯ, ತೆಂಕಿಲಾಯ, ಪುತ್ರಾಯ, ಕೆಕುಡೆನಾಯ,

ಬಾಯಿರಿತಾಯ, ಕಲ್ಲೂರಾಯ, ಬೈಪಾಡಿತಾಯ, ವಪ್ಪಂತಾಯ, ಇಡೆಪಾಡಿತ್ತಾಯ, ಕೊರ್ನಾಯ, ಮರಡಿತಾಯ, ಉಡುಪ, ಬ್ರಹ್ಮಕಾರಂತ, ಬನ್ನಿಂಜಿತಾಯ, ಶಿವತಾಯ.

ಸ್ಮಾರ್ತರು: – ನೂಜಿತಾಯ, ಕಿದೆನಾಯ, ನಾರಳತಾಯ, ತಾಳಂತ್ರಾಯ, ಅಯಮಿನಾಯ, ಮಣ್ಣಕಳತಾಯ, ಅಲೆವೂರಾಯ, ಬ್ರಹ್ಮಕಾರಂತ, ಕಲ್ಲೂರಾಯ, ಉಡುಪ, ಬೈಪಾಡಿತ್ತಾಯ, ಕೊಂಗ್ರಿನಾಯ, ಮುಂಡಪಾಡಿತ್ತಾಯ, ಕೊಡಂಚ.

ಗ್ರಾಮಣಿಗಳು: – ಪಾತುರಾಯ, ಪೊಯ್ಯತ್ತಾಯ, ಶುಳ್ಳಣ್ಣಾಯ, ಕಿದೆಕಿದೆನಾಯ, ಕೋಟಂಜಿತ್ತಾಯ, ತೆನ್ನರಾಯ, ಕಣ್ಣರಣ್ಣಾಯ, ಮೂಡಂತಿಲಾಯ, ನಡುವಂತಿಲಾಯ, ಕುಂಜಿತ್ತಾಯ, ಹೆರಳ, ಕಾರಾಂತ, ನಾರಿತ್ತಾಯ, ಎಡಬೆಟ್ಟಿನಾಯ, ಹೆಬ್ಬಾರ, ನೀರಾವರದಲ್ಲಿ ಸಂಪಿಗೆತ್ತಾಯ, ಅಂಬರಣ್ಣಾಯ, ಅರಮನೆತಾಯ, ಮೂಡಪ್ಪಿನಾಯ, ಪುತ್ರಣ್ಣಾಯ, ಕಕರಣ್ಣಾಯ, ಕಿನಕಳತ್ತಾಯ, ಉಡುಪ, ಉರಂಬಳಿ.

ಅಧಿವಾಸಿಗಳು: – ಅಲೆವೂರಾಯ, ಪಾಗಂಪಿನಾಯ, ತಾರೆತಾಯ, ಅಣ್ಣಕುಂಜಿತಾಯ, ಬಾಶಕಣ್ಣಾಯ, ಕೆದಟಿರಾಯ, ಅರ್ಬಿರಾಯ, ಪೆಲಾಡಿತಾಯ, ಕನ್ನರಾಡಿತಾಯ, ಕಂಬರಣ್ಣಾಯ, ಉಳಿಯಾರಾಯ, ಕಬೆಕೊಡಿನಾಯ, ಮಲಾಂಪಾಡಿತ್ತಾಯ, ಏರಿಂಕತಾಯ, ಬತ್ರೊಡಿತಾಯ, ಪುಂಜುಕಣ್ಣಾಯ, ಕುದುರಾಯ, ನಿಂಜೂರಾಯ, ಇರವತ್ತೂರಾಯ, ನಂಬುನಿತ್ತಾಯ, ಜಾತೊಡಿತಾಯ.

ಜನ್ನಿಗಳು: – ಮಡಿಕುಡಿಲಾಯ, ಶಿಡಿಕುಡಿಲಾಯ, ತಿನಕಳತಾಯ, ಮಡುಮಣ್ಣಾಯ, ಕಾಪುಂಜಾಯ, ವೈಲಾಯ, ಮಂಜಿತ್ತಾಯ, ಕೆಮ್ಮುಂಡೆನಾಯ, ವೊಡಂಬಾಡಿತಾಯ, ಕಬೆಕೊಡಿನಾಯ, ಹೆಬ್ಬಾರ, ಉಂಗುರಪಳ್ಳಿ, ಯೆಡಬೆಟ್ಟಿನಾಯ, ಕತೊಡೆನಾಯ, ರೈಪತ್ತಾಯ, ಕೊಡಿತಿಲ್ಲಾಯ, ಬಾಬೆತಿಲಾಯ, ಮಡಿಲಾಯ, ಊರಾಳ, ಕುದುರೆತ್ತಾಯ, ತೆಂಜತ್ತಾಯ, ಕುಂತರಾಯ, ಮರತಾಯ, ಅಮ್ಮಣ್ಣಾಯ, ಬಾಯತ್ತಾಯ, ಪುದೆನಾಯ, ಮುಲತಾಯ, ಅರ್ದುಂಡಾಯ, ಅಂಬರಣ್ಣಾಯ, ಉಳಿತಾಯ, ಪಡ್ಡಿಲಾಯ, ಎಡೆಪುಳಿತಾಯ, ಊರಾಯ, ಪಡಿಲಾಯ, ಈರಕಡಿತ್ತಾಯ, ಪೊಣೆತ್ತಾಯ, ಉಡುಪ, ಹೆರಳ.

ಬಲ್ಲಾಳರು: – ತಲೆಪಾಡಿ, ಮಂಜನೊಡಿ, ಏಡುಂಬೂರು, ಮುಡಿಲ.

ದೊರೆಗಳು: – ಕುಂದ ಹೆಗ್ಗಡೆ, ಮುದ ಹೆಗ್ಗಡೆ, ಮಾರಂಬ ಹೆಗ್ಗಡೆ, ಬಿದರೇಶ, ಪೊಮಂಜೂರು, ರಾಮನಾಥ, ಬೋಳದ ದೇಶಿಂಗತ್ತಾಯ.

ಸಾಮಂತರು: – ಇರವತ್ತೂರ ಬಸವ ಸಾವಂತ, ಮೂಲಿಕೆ ಕನ್ನಿಕ ಸಾವಂತ.

ನಾಡುಗಳು: – ನಲ್ವತ್ತನಾಡು, ಕೆಲನಾಡು.

ಬೀಡು: – ಬೈಂದೂರು, ಬಟ್ಟಕಳ.

ದಿವಾಣ: – ಕದರಿ, ಕಾರ್ಕಳ.

ಸಿಂಹಾಸನ: – ಬಾರ್ಕೂರು, ಮಂಗಳೂರು.

ರಾಜಸ್ಥಾನ: – ಬಾರ್ಕೂರು, ಮಂಗಳೂರು, ಕಡಬ, ಹೊನ್ನಾವರ.

ಜನ್ನಿಗಳ ಮರ್ಯಾದೆ: – ಅಟ್ಟೆ ಮುರಿದ ಅಕ್ಕಿ ೧, ಐದು ಮೋಲೆ ಎಮ್ಮೆ ೧, ತಪ್ಪಿ ಬಂದ ಗೋವು ೧, ಕೆಗ್ಗೊಡ ೧, ಜೋಡುಮರ ೧, ಕೂಪ ೧, ಕುಲಾಶ್ರಂಬಿಲ ೧, ಮನಕಾಲೇ ಶೃಂಗವಾದ್ಯ ೧, ನಡಮಡಿ ೧, ಪಕ್ಷ ಕವಾಟ ೧, ಮಕರತೋರಣ ೧, ದೀಪಮಾಲಾಸ್ತಂಭ ೧, ಛತ್ರ ೧, ದೊಳಮಂಜಿ ೧, ಕೆಟ್ಟು ಎದ್ದುಬಂದ ಹೆಣ್ಣು ೧, ರತ್ನಕಂಬಳಿ ೧. ಹೀಗೆ ಹದಿನಾರು ಕಟ್ಟಳೆಯನ್ನು ಲೋಕಾದಿತ್ಯರಾಯನು ಸ್ಥಾಪಿಸಿದನು. ಇದೇ ಪ್ರಕಾರ ಹದಿನಾರು ಮರಿಯಾದಿಯನ್ನು ಕೂಡಿ ಗ್ರಾಮದಲ್ಲಿ ಆರು ಗ್ರಾಮದವರಿಗೆ ವಿಧಿಸಿದನು.

ಗ್ರಾಮಡ ವಿವರ:- ಹರತಟ್ಟೆ, ಕಾರತಟ್ಟು, ಕೊಡತಟ್ಟು, ಹಂದಟ್ಟು, ಕಾರುಕಳ –ಈ ರೀತಿಯಾದ ಸಂಕೇತಪದ್ಧತಿಯನ್ನು ವಿಧಿಸಿದನು.

(ಗ್ರಾಮಪದ್ಧತಿಯ ಮೊದಲನೆಯ ಪ್ರತಿಯನ್ನು ಇನ್ನು ಮುಂದೆ 'ಗ್ರಾ1' ಎಂದು ಕರೆಯಲಾಗುವುದು.)

ಗ್ರಾಮಪದ್ಧತಿಯ ಎರಡನೆಯ ಪ್ರತಿಯನ್ನು (ಗ್ರಾ2) ಸ್ಥೂಲವಾಗಿ ಎರಡು ಭಾಗವಾಗಿ ವಿಂಗಡಿಸಬಹುದು. ಮೊದಲನೆಯ ಭಾಗದಲ್ಲಿ ಬ್ರಾಹ್ಮಣಕುಲಗಳ ಹೆಸರುಗಳು, ಅವರಿರುವ ಗ್ರಾಮಗಳು, ಆ ಗ್ರಾಮಗಳಲ್ಲಿ ಬ್ರಾಹ್ಮಣಕುಲಗಳ ಕರ್ತವ್ಯ ಈ ವಿಚಾರಗಳನ್ನು ವಿಸ್ತಾರವಾಗಿ ಸೂಚಿಸಲಾಗಿದೆ. ಈ ಭಾಗವನ್ನು ಕನ್ನಡ ಭಾಷೆಯಲ್ಲಿ ಬರೆಯಲಾಗಿದೆ. ಈ ಪ್ರತಿಯ ಎರಡನೆಯ ಪ್ರತಿ ಸಂಸ್ಕೃತ ಭಾಷೆಯಲ್ಲಿದ್ದು ಇದನ್ನು 'ಮಯೂರವರ್ಮವಂಶಾವಳಿ' ಎಂದು ಹೆಸರಿಸಲಾಗಿದೆ.

ಈ ಪ್ರತಿಯಲ್ಲಿ ಪರಶುರಾಮಕ್ಷೇತ್ರದ ಸೃಷ್ಟಿಯ ವಿಚಾರವಾಗಿ ಹೆಚ್ಚು ವಿಸ್ತಾರವಾದ ನಿರೂಪಣೆ ಕಾಣುವುದಿಲ್ಲ. ಅದರ ಬದಲಾಗಿ ದಕ್ಷಿಣ ಕನ್ನಡದ ವಿವಿಧ ಗ್ರಾಮಗಳ ಹಾಗೂ ಬ್ರಾಹ್ಮಣ ಕುಲಗಳ ವಿಚಾರವಾಗಿ ನಮಗೆ ಹೆಚ್ಚು ಸಾಮಗ್ರಿ ದೊರೆಯುತ್ತದೆ. ಈ ಪ್ರತಿಯ ಪ್ರಕಾರ ಬ್ರಾಹ್ಮಣ ಕುಲಗಳನ್ನು ಈ ಕೆಳಗಿನಂತೆ ವಿಭಾಗಿಸಬಹುದು.

೧. ಅತ್ಯುತ್ತಮರು : ಶ್ರೌತ ಮತ್ತು ಸ್ಮಾರ್ತ

೨. ಎರಡನೇ ಉತ್ತಮರು : ಭಟ್ಟ, ತಂತ್ರಿ ಮತ್ತು ಪಂಡಿತ

೩. ಮಧ್ಯಮೋತ್ತಮರು : ಪಕ್ಷನಾಥ, ಸಭಾಪತಿ, ಬಲ್ಲಾಳ, ಅಣ್ಣಗ್ರಾಮಣಿ, ಗ್ರಾಮಣಿ, ಜನ್ನಿ, ಅಧಿವಾಸಿ

೪. ವಿಪ್ರೋತ್ತಮರು : ಲೌಕಿಕರು

ಈ ಪ್ರತಿಯು ಹೇಳುವಂತೆ ಬಿಟ್ಟುಪಾಡಿ ಬಲ್ಲಾಳರು ಪೂರ್ವದ ಹದಿನಾರು ಗ್ರಾಮಗಳಿಗೂ ಹಾಗೂ ನಿಡಂಬೂರು ಬಲ್ಲಾಳರು ಪಶ್ಚಿಮದ ಹದಿನಾರು ಗ್ರಾಮಗಳಿಗೂ ಪಕ್ಷನಾಥರು. ಶಬರಾಯ ಹಾಗೂ ಶಿಬರಾಯ ಪೂರ್ವದ ಹಾಗೂ ಪಶ್ಚಿಮದ ಗ್ರಾಮಗಳಿಗೆ ಸಭಾಪತಿಗಳು. ವಪ್ಪಂತಾಯ ಹಾಗೂ ಪಿಜತ್ತಾಯರು ಪೂರ್ವದ ಹಾಗೂ ಪಶ್ಚಿಮದ ಗ್ರಾಮಗಳಿಗೆ ಪಂಡಿತರು. ದೇಶದ ಚಾತುರ್ವರ್ಣ್ಯ ಪದ್ಧತಿಯನ್ನು ನೋಡಿಕೊಳ್ಳಬೇಕಾದದ್ದು ಪಕ್ಷನಾಥರು ಅಥವಾ ಪಕ್ಷನಾಯಕರು. ಸ್ಮೃತಿ, ಶಾಸ್ತ್ರ, ಪ್ರಾಯಶ್ಚಿತ್ತ ಹಾಗೂ ಕ್ರಮಗಳ ವಿಚಾರವಾಗಿ ಪಂಡಿತರು ಸಭಾಪತಿಗಳಿಗೆ ಕೆಲವು ಸಲಹೆಸೂಚನೆಗಳನ್ನು ಕೊಡುತ್ತಿದ್ದರು. ಆಗಿನ ಕಾಲದಲ್ಲಿ ನಾಲ್ಕು ಬಲ್ಲಾಳರಿದ್ದು ಪ್ರತಿಯೊಬ್ಬರೂ ೮ ಗ್ರಾಮಗಳ ಅಧಿಪತಿಗಳಾಗಿದ್ದರು. ಕುಂಞಿಮಣ್ಣಾಯ, ಕವುಡಂಬಾಡಿತ್ತಾಯ, ತಲೆಪಾಡಿತಾಯ ಮತ್ತು ಮಂಜನಾಡಿತಾಯ ಇವರೇ ಮೇಲೆ ಹೆಸರಿಸಿದ ನಾಲ್ಕು ಬಲ್ಲಾಳರು. ಆಗಿನ ಕಾಲದಲ್ಲಿ ೮ ಅಣ್ಣಗ್ರಾಮಗಳು, ೧೬ ಗ್ರಾಮಣಿಗಳು ಹಾಗೂ ೩೨ ಅಣ್ಣಮಣಿಗಳಿದ್ದರು. ಈ ಪ್ರತಿಯಲ್ಲಿ ೨೪ ಶ್ರೌತಾಗ್ನಿಹೋತ್ರಿಗಳು ಹಾಗೂ ೬೪ ಭಟ್ಟರುಗಳನ್ನು ಕೂಡ ಸೇರಿಸಲಾಗಿದೆ. ದೇವಸ್ಥಾನ, ಕ್ಷೇತ್ರಗಳು, ನಾಗಬ್ರಹ್ಮಭೂತ, ಆಗಮ, ಮಂತ್ರಶಾಸ್ತ್ರ, ಕಲಾಶಾಸ್ತ್ರ, ಹಬ್ಬಗಳು ಹಾಗೂ ಹರಿದಿನಗಳು ಇತ್ಯಾದಿಗಳನ್ನು ನೋಡಿಕೊಳ್ಳುತ್ತಿದ್ದವರು ತಂತ್ರಿಗಳು. ದೇವಸ್ಥಾನದ ಆಡಳಿತ ಮಾಡುತ್ತಿದ್ದವರು ಜನ್ನಿಗಳು. ಅಧಿವಾಸಿಗಳು ಹಾಗೂ ಅಧಿವಂಶಿಗಳು ಜನ್ನಿಗಳ ಸೇವಕರಾಗಿದ್ದರು. ಈ ಎಲ್ಲ ಬ್ರಾಹ್ಮಣರು ಸೇರುವ ಸ್ಥಳ ಕೋಟ ನರಸಿಂಹ ದೇವಸ್ಥಾನ ಹಾಗೂ ಶಿವಳ್ಳಿ ಅನಂತೇಶ್ವರ ದೇವಸ್ಥಾನ.

ಗ್ರಾಮಪದ್ಧತಿಯ ಈ ಪ್ರತಿಯ ಕೊನೆಯಲ್ಲಿ ಮಯೂರವರ್ಮ ಮೂವತ್ತೆರಡು ಗ್ರಾಮಗಳಿಗೆ ನೀಡಿದ ಬಿರುದಾವಳಿಗಳನ್ನು ಹೆಸರಿಸಲಾಗಿದೆ. ಅವುಗಳು : ಇಳಿದುಹೋದ ಹೆಣ್ಣು, ಬಸುರು ಬಂದ ಹೆಣ್ಣು, ಕೂಡ ಪಶು, ಐದು ಮೊಲೆ ಪಶು, ಗತಿ ಮುತ್ತಿದವನ ಬದುಕು, ಅನಾಥನ ಒಡವೆ, ಅಟ್ಟ ಮುರಿದ ಅಕ್ಕಿ, ನಡೆಮಡಿ, ನಡೆಚಪ್ಪರ, ನಡೆನೃತ್ಯ, ಹಗಲು ದೀವಟಿಗೆ, ಉಭಯ ಚಾಮರ, ಜೋಡು ವ್ಯಜನಾ, ಉಭಯಚಾವಡಿ, ಶಂಖಧ್ವನಿ, ಶ್ವೇತಛತ್ರಿ, ಗಜಾಶ್ವ, ಅಂದಳಾದಿ ವಾಹನ, ಸಿಂಹಾಸನ, ಮದನಕ್ಕೈ, ಗಜದ್ವಾರ, ಧ್ವಜಕ್ಷೇತ್ರ.

ಈ ಪ್ರತಿಯ ಎರಡನೆಯ ಭಾಗವನ್ನು 'ಮಯೂರವರ್ಮ ವಂಶಾವಳಿ' ಎಂದು ಹೆಸರಿಸಲಾಗಿದ್ದರೂ ಇದನ್ನು ವಂಶಾವಳಿ ಎಂದು ಕರೆಯುವ ಬದಲು ಕೆಲವು ರಾಜರುಗಳ ಪಟ್ಟಿ ಎಂದು ಹೇಳುವುದು ಹೆಚ್ಚು ಸರಿಯಾಗುತ್ತದೆ. ಯಾಕೆಂದರೆ ಈ

ವಿವಿಧ ರಾಜರುಗಳಿಗೆ ಇದ್ದ ಪರಸ್ಪರ ಸಂಬಂಧವನ್ನು ಈ ವಂಶಾವಳಿ ಹೇಳುವುದಿಲ್ಲ. ಈ ರಾಜರುಗಳು ತುಳುನಾಡನ್ನು ಆಳಿದ್ದಾರೆ ಎನ್ನುವುದಕ್ಕೆ ಐತಿಹಾಸಿಕವಾಗಿ ಯಾವುದೇ ಪುರಾವೆಗಳು ದೊರೆಯುವುದಿಲ್ಲ. ಈ ವಿವಿಧ ರಾಜರುಗಳ ಪಟ್ಟಿಯನ್ನು ಈ ಕೆಳಗಿನಂತೆ ಕೊಡಬಹುದು:

| | | |
|---|---|---|
| ನಂದನಂದರಾಯ | : | ೮೫ ವರ್ಷ |
| ನಂದನರಾಯ | : | ೭೦ ವರ್ಷ |
| ವಿಜಯನಂದನರಾಯ | : | ೪೦ ವರ್ಷ (ಈ ಮೂರು ರಾಜರುಗಳು ೧೯೫ ವರ್ಷ ಆಳಿದರು.) |
| ವಹಿಕರಾಯ | : | ೭೨ ವರ್ಷ |
| ಕುಂತೀರಾಯ | : | ೭೭ ವರ್ಷ |
| ಕೊಯತರಾಯ | : | ೧೯ ವರ್ಷ |
| ಜಯಂತಿಕ ಕದಂಬರಾಯ | : | ೪೫ ವರ್ಷ |
| ಹೇಮಾಂಗರಾಯ | : | |
| ಲೋಕಾದಿತ್ಯಮಯೂರವರ್ಮ | : | ೭೨ ವರ್ಷ |
| ಚಂದ್ರಾಂಗದ | : | ೪೫ ವರ್ಷ |
| ಚಿತ್ರವೀರ್ಯವರ್ಮ | : | ೬೪ ವರ್ಷ |
| ಜಯವರ್ಮರಾಯ | : | ೫೦ ವರ್ಷ |
| ದೇವವರ್ಮರಾಯ | : | ೪೩ ವರ್ಷ |
| (ಹೆಸರು ಓದಲಾಗಿಲ್ಲ) | : | ೭೨ ವರ್ಷ |
| ಜಯಚಂದರಾಯ | : | ೮೦ ವರ್ಷ |
| ಚಿಕ್ಕವೀರ್ಯರರ್ಮರಾಯ | : | ೫೦ ವರ್ಷ |
| ಅಂಗಾರವರ್ಮರಾಯ | : | ೯೫ ವರ್ಷ |

(ಮಯೂರವರ್ಮ ಹಾಗೂ ಆತನ ಕುಲದವರು ೫೩೯ ವರ್ಷ ಆಳಿದರು.)

ಈ ಮೇಲಿನ ಪಟ್ಟಿಯನ್ನು ನೋಡುವಾಗ ಗ್ರಾಮಪದ್ಧತಿಯಲ್ಲಿ ಕೇವಲ ಕದಂಬ ರಾಜರ ಸಂತತಿ ಬಗ್ಗೆ ಮಾತ್ರವಲ್ಲದೆ ಬೇರೆ ರಾಜಕುಲಗಳ ಬಗ್ಗೆ ಮಾಹಿತಿ ಕೊಡಲಾಗಿದೆ ಎಂದು ತಿಳಿಯುತ್ತದೆ. ಈ ರಾಜಕುಲಗಳು ಬಹಳ ಇತ್ತೀಚಿನ ವರೆಗೆ ಕೂಡ ರಾಜ್ಯವಾಳಿದ್ದಿರಬಹುದು. ಅಥವಾ ತುಳುನಾಡಿನ ಕೆಲವೇ ಪ್ರಾಂತಗಳನ್ನು ಆಳಿದ್ದಿರಬಹುದು. ಇದರಿಂದಾಗಿ ಗ್ರಾಮಪದ್ಧತಿಯ ಬೇರೆಬೇರೆ ಪ್ರತಿಗಳಲ್ಲಿ ಆಗಿನ ಕಾಲದಲ್ಲಿ ನಡೆಯುತ್ತಿದ್ದ ರಾಜಕೀಯ ಹಾಗೂ ಸಾಮಾಜಿಕ ಬದಲಾವಣೆಗಳ ಬಗ್ಗೆ ವಿಶೇಷ ಮಾಹಿತಿ ದೊರೆಯುತ್ತದೆ. ಈ ಎಲ್ಲಾ ಮಾಹಿತಿಗಳು ಐತಿಹಾಸಿಕವಾಗಿ ಸತ್ಯ ಎಂದು ಪರಿಗಣಿಸಲು ಕೆಲವೊಮ್ಮೆ ಆಧಾರ ದೊರೆಯದೆ ಹೋಗಬಹುದಾದರೂ ಕೂಡ ಇದೇ ಒಂದು ಕಾರಣದಿಂದ ಗ್ರಾಮಪದ್ಧತಿಯ ಐತಿಹಾಸಿಕ ಮೌಲ್ಯವನ್ನು

ಕಡೆಗಣಿಸಲು ಸಾಧ್ಯವಿಲ್ಲ. ಗ್ರಾ2ರಲ್ಲಿ ತುಳುನಾಡನ್ನು ೩೨ ರಾಜರುಗಳು ಆಳಿದ್ದರೆಂದೂ ಹೈಗವನ್ನು ಮೂರು ರಾಜರು ಹಾಗೂ ಮಲಯಾಳವನ್ನು ೩೨ ರಾಜರು ಆಳಿದ್ದರು ಎಂದು ಹೇಳಲಾಗಿದೆ. ಈ ಪ್ರತಿಯಲ್ಲಿ ಭೂತಾಳ ಪಾಂಡ್ಯರಾಯನ ಹೆಸರು ಬರುತ್ತದೆ.

ಗ್ರಾ3ನ್ನು ಬರೆದವನು ವರಡಾ ತಿಮ್ಮಪ್ಪ. ಇದನ್ನು ಕಾವ್ಯಶೈಲಿಯಲ್ಲಿ ಬರೆಯಲಾಗಿದೆ. ಸೋಮಯಾಜಿ ಎನ್ನುವಾತ ಶಾಲಿವಾಹನ ಶಕ ೧೭೬೮(ಕ್ರಿ. ಶ. ೧೮೪೬)ರಲ್ಲಿ ಇದರ ಪ್ರತಿ ಮಾಡಿದನು. ಪುರಾಣಗ್ರಂಥವೊಂದನ್ನು ಬರೆಯಲಾದುವ ಶೈಲಿಯಲ್ಲಿ ಈ ಪ್ರತಿಯನ್ನು ರಚಿಸಲಾಗಿದೆ. ಈ ಗ್ರಂಥ ಪಾರ್ವತಿ ಪ್ರಾರ್ಥನೆಯೊಂದಿಗೆ ಪ್ರಾರಂಭವಾಗುತ್ತದೆ. ಇದನ್ನು ಗುಪ್ತವಾಗಿ ಕೇಳತಕ್ಕದ್ದು. ಹಾಗೂ ಇದನ್ನು ಪ್ರಶ್ನಿಸಬಾರದು. ಪ್ರಾಯಶಃ ಇದು ಆಗಿನ ಅಬ್ರಾಹ್ಮಣ ವರ್ಗದವರು ಈ ಗ್ರಂಥದ ಭಾಗಗಳನ್ನು ಕೇಳಬಾರದು ಎಂಬ ಉದ್ದೇಶದಿಂದ ಈ ಮೇಲಿನ ಹೇಳಿಕೆ ಮಾಡಿರಬಹುದು. ಜಾತಿಪದ್ಧತಿಯ ಕಾನೂನುಗಳು ಗ್ರಾಮಪದ್ಧತಿಯ ರಚನೆಯ ಕಾಲದಲ್ಲಿ ಕೂಡ ಮುಂದುವರಿದಂತೆ ಕಂಡುಬರುತ್ತದೆ.

ಗ್ರಾ3ರ (ಗ್ರಾಮಪದ್ಧತಿಯ ಮೂರನೇ ಪ್ರತಿಯ) ಪೌರಾಣಿಕ ಭಾಗ ಜಮದಗ್ನಿ, ಆತನ ಪತ್ನಿ ಹಾಗೂ ಆತನ ಪುತ್ರ ಪರಶುರಾಮನ ಕತೆಯೊಂದಿಗೆ ಪ್ರಾರಂಭವಾಗುತ್ತದೆ. ಕಾರ್ತವೀರ್ಯಾರ್ಜುನ ಜಮದಗ್ನಿಯ ಅಮೂಲ್ಯ ಆಕಳುಗಳನ್ನು ಸೆರೆ ಹಿಡಿಯಬೇಕೆಂದು ಪ್ರಯತ್ನಿಸಿದಾಗ ಪರಶುರಾಮನು ಆತನ ವಿರುದ್ಧ ಸೇಡು ತೀರಿಸಿಕೊಳ್ಳುತ್ತಾನೆ. ಈ ಭಾಗವು ಗ್ರಾ1ರಲ್ಲಿ ಹಾಗೂ ಗ್ರಾ2ರಲ್ಲಿ ಇರುವುದಿಲ್ಲ. ಗ್ರಾ3ರ ಮುಂದಿನ ಭಾಗದಲ್ಲಿ ಪರಶುರಾಮನು ಪರಶುರಾಮ ಕ್ಷೇತ್ರ ನಿರ್ಮಾಣ ಮಾಡಿದ ಬಳಿಕ ಬ್ರಾಹ್ಮಣರಿಗೆ ಕೊಟ್ಟ ಗ್ರಾಮಗಳ ಬಗೆಗೆ ಹಾಗೂ ಮಯೂರವರ್ಮನು ಈ ಬ್ರಾಹ್ಮಣ ಅಗ್ರಹಾರಗಳನ್ನು ಪ್ರೋತ್ಸಾಹಿಸಿದ ಬಗೆಗೆ ಮಾಹಿತಿ ಇದೆ.

ಗ್ರಾ3 'ಪತಿತಬ್ರಾಹ್ಮಣ'ರ ಕುರಿತು ಕೆಲವು ಕುತೂಹಲಕಾರಿ ಮಾಹಿತಿಯನ್ನು ನೀಡುತ್ತದೆ. ಇಲ್ಲಿ ಹೇಳಲಾಗಿರುವ ಕೆಲವು ಕುತೂಹಲಕಾರಿ ಅಂಶಗಳು ಮೊದಲಿನ ಎರಡು ಪ್ರತಿಗಳಲ್ಲಿ ಇರುವುದಿಲ್ಲ. ಇದರಲ್ಲಿ ಭೂಮಿಯ ಒಡೆತನದ ಕುರಿತಾಗಿ ಕೋಟೇಶ್ವರ ಬ್ರಾಹ್ಮಣರಿಗೂ ಕೋಟ ಬ್ರಾಹ್ಮಣರಿಗೂ ನಡೆದ ಕಲಹದ ವರ್ಣನೆ ಇದೆ. ಇದರ ಪ್ರಕಾರ ಭೂಮಿಯ ಒಡೆತನವನ್ನು ಪಡೆಯಲು ಕೋಟೇಶ್ವರ ಬ್ರಾಹ್ಮಣರು ಕುಶಲ ತಂತ್ರವೊಂದನ್ನು ಉಪಯೋಗಿಸುತ್ತಾರೆ. ನೆಲದಲ್ಲಿ ಒಂದು ಹೊಂಡವನ್ನು ಮಾಡಿ ಅದರಲ್ಲಿ ಒಬ್ಬ ಕೋಟೇಶ್ವರ ಬ್ರಾಹ್ಮಣನನ್ನು ಅಡಗಿಸಿಡುತ್ತಾರೆ. ಭೂಮಿ ಯಾರದ್ದೆಂದು ಭೂಮಿತಾಯಿಯನ್ನು ಪ್ರಶ್ನೆ ಮಾಡಿದಾಗ ಇದು ಕೋಟೇಶ್ವರ ಬ್ರಾಹ್ಮಣರದ್ದು ಎಂದು ನೆಲದಡಿಯಲ್ಲಿದ್ದ ಕೋಟೇಶ್ವರ ಬ್ರಾಹ್ಮಣ ಹೇಳುತ್ತಾನೆ. ಆದರೆ ಒಂದು ಅಶರೀರವಾಣಿ ಕೋಟೇಶ್ವರ ಬ್ರಾಹ್ಮಣರ ಕುಟಿಲ ತಂತ್ರವನ್ನು ಬಯಲಿಗೆಳೆಯುತ್ತದೆ. ಹಾಗೂ ಅವರು ಪತಿತ ಬ್ರಾಹ್ಮಣರಾಗಲೆಂದು ಶಾಪ ಕೊಡುತ್ತದೆ. (ನೋಡಿ: ಕೋಟ ಶಂಕರನಾರಾಯಣ ಕಾರಂತ, 'ಕೂಟಮಹಾಜಗತ್ತು',

ಸಾಲಿಗ್ರಾಮ, ೧೯೫೮) ಈಗ ಕೆಲವು ಕೋಟೇಶ್ವರ ಬ್ರಾಹ್ಮಣಕುಲಗಳು ಸುರತ್ಕಲ್ ಸಮೀಪದ ಇಡ್ಯದಲ್ಲಿ ನೆಲಸಿರುತ್ತವೆ. ಇವರು ಹಿಂದೆ ಸ್ಮಾರ್ತ ಸಂಪ್ರದಾಯಕ್ಕೆ ಸೇರಿರುವ ಸಾಧ್ಯತೆಯಿದೆ. ಪ್ರಾಯಃ ಹಿಂದಿನ ಕಾಲದಲ್ಲಿ ಕೋಟೇಶ್ವರ ಹಾಗೂ ಕೋಟ ಬ್ರಾಹ್ಮಣರ ಸಂಪ್ರದಾಯ, ಆಚಾರ ವಿಚಾರ ಇತ್ಯಾದಿ ಒಂದೇ ಆಗಿದ್ದಿರಬಹುದು. ಈ ಬ್ರಾಹ್ಮಣರನ್ನು ಸೋದೆಮಠದ ವಾದಿರಾಜರು ವೈಷ್ಣವಪಂಥಕ್ಕೆ ಸೇರುವಂತೆ ಮಾಡಿದರು ಎಂಬ ಹೇಳಿಕೆ ಇದೆ. ಈ ಕತೆ ಸಹ್ಯಾದ್ರಿಖಂಡದಲ್ಲಿ ಬರುತ್ತದೆ. (ನೋಡಿ: ಕುಪ್ಪಣ್ಣಾಚಾರ್ಯ, 'ಶ್ರೀ ಗುರುವರ ವಾದಿರಾಜರ ಚರಿತಾಮೃತ', ಕಿನ್ನಿಗೋಳಿ, ೧೯೮೩).

ಗ್ರಾ3ರಲ್ಲಿ ಆಗಿನ ಕಾಲದ ಹೊಲೆಯರ ರಾಜನಾದ ಹುಬ್ಬಾಸಿಗನ ದುಸ್ಸಾಹಸದ ಕತೆಯನ್ನು ಹೇಳಲಾಗಿದೆ. ಕದಂಬವಂಶದ ಚಂದಸೇನ, ಚಂದ್ರಾಯುಧನೆಂಬವನ ಸಹಾಯದಿಂದ ಹುಬ್ಬಾಸಿಗನನ್ನು ಕೊಲ್ಲುತ್ತಾನೆ. ಹಾಗೂ ಉಳಿದ ಆತನ ಅನುಯಾಯಿಗಳು ಸಮಾಜದ ಬೇರೆ ವರ್ಗಗಳ ಸೇವಕರಾಗಿರಬೇಕೆಂದೂ ಅವರಲ್ಲಿ ಒಗ್ಗಟ್ಟು ಇರಲೇಬಾರದೆಂದೂ ಶಾಪ ಕೊಡುತ್ತಾನೆ. ಈ ಗ್ರಂಥದಲ್ಲಿ ಆರ್ಯಾವರ್ತ, ಬ್ರಹ್ಮಾವರ್ತ, ಪದ್ಮಾವರ್ತ ಹಾಗೂ ನಾಗಾವರ್ತದ ಕುರಿತು ಉಲ್ಲೇಖವಿದೆ. ಇದು ಪಂಚದ್ರಾವಿಡರ ಬಗ್ಗೆ ಮಾಹಿತಿ ಕೊಡುವಾಗ ಮಹಾರಾಷ್ಟ್ರ ದ್ರಾವಿಡ, ಆಂಧ್ರ ದ್ರಾವಿಡ, ಕರ್ನಾಟಕ ಹಾಗೂ ಚೋಳ ದ್ರಾವಿಡರ ಬಗೆಗೆ ಮಾಹಿತಿ ಕೊಡುತ್ತದೆ. ಮೂವತ್ತೆರಡು ಗ್ರಾಮವೆಂದು ಹೇಳಲು ಉಪಯೋಗಿಸಲಾಗಿರುವ 'ಬತ್ತೀಸ' ಎನ್ನುವ ಶಬ್ದ ಹಿಂದೀ ಭಾಷೆಯದ್ದಾಗಿರುತ್ತದೆ. ಇದರಲ್ಲಿ, 'ಹತ್ತು ಸಾವಿರ ಜಗತ್ತು' ಹಾಗೂ ಕೋಟ ನರಸಿಂಹ ದೇವಸ್ಥಾನ ನಿರ್ಮಾಣದ ಕುರಿತು ಮಾಹಿತಿ ದೊರೆಯುತ್ತದೆ. ('ಹತ್ತು ಸಾವಿರ ಮಹಾಜಗತ್ತು' ಎಂಬ ಶಬ್ದ ಕ್ರಿ.ಶ. ೧೫೨೦ರ ಶಾಸನವೊಂದರಲ್ಲಿ ಕಾಣಸುತ್ತದೆ. ಎ.ಆರ್. ಸಂ. ೫೧೫. ಫ್ಲೋರ್ ೧೯೨೮-೨೯)

ಈ ಮೇಲೆ ಕಾಣಿಸಿದ 'ಗ್ರಾಮಪದ್ಧತಿ'ಯ ಮೂರು ಪ್ರತಿಗಳಲ್ಲಿ ಕೆಲವು ಭೌಗೋಳಿಕ ಅಂಶಗಳಿವೆ. ಗ್ರಾ1 ಹೇಳುವಂತೆ "ಹೈವ" ದಕ್ಷಿಣದಲ್ಲಿ ಗಂಗಾವಳಿ, ಪೂರ್ವದಲ್ಲಿ ಸಹ್ಯಪರ್ವತ ಹಾಗೂ ಪಶ್ಚಿಮದಲ್ಲಿ ಸಮುದ್ರದ ನಡುವೆ ಇದೆ. ತೌಳವವು ಉತ್ತರದಲ್ಲಿ ಗಂಗಾವಳಿ, ದಕ್ಷಿಣದಲ್ಲಿ ನೀಲೇಶ್ವರ ನದಿ, ಪೂರ್ವದಲ್ಲಿ ಸಹ್ಯಪರ್ವತ ಹಾಗೂ ಪಶ್ಚಿಮದಲ್ಲಿ ಇರುವ ಸಮುದ್ರದ ನಡುವೆ ಇದೆ. ಕೇರಳದೇಶವು ಉತ್ತರದಲ್ಲಿ ನೀಲೇಶ್ವರ ನದಿ, ದಕ್ಷಿಣದಲ್ಲಿ ಕನ್ಯಾಕುಮಾರಿ, ಪಶ್ಚಿಮದಲ್ಲಿ ಸಮುದ್ರ ಹಾಗೂ ಪೂರ್ವದಲ್ಲಿರುವ ಸಹ್ಯಪರ್ವತಗಳ ನಡುವೆ ಇದೆ. ಈ ವಿಚಾರಗಳು ಹೈವ, ತೌಳವ ಮತ್ತು ಕೇರಳ –ಈ ಪ್ರದೇಶಗಳ ಭೌಗೋಳಿಕ ವಿವರಣೆಯನ್ನು ನೀಡುತ್ತದೆ. ಭೌಗೋಳಿಕವಾಗಿ ಗ್ರಾಮಪದ್ಧತಿಯು ಈಗ ಕೇರಳರಾಜ್ಯಕ್ಕೆ ಸೇರಿರುವ ಕಾಸರಗೋಡನ್ನು ಒಳಗೊಂಡಿದೆ. ಈ ಗ್ರಂಥದಲ್ಲಿ ಸಿಕ್ಕುವ ಸ್ಥಳನಾಮಗಳ ಅಧ್ಯಯನದಿಂದ ಈ ಸ್ಥಳಗಳ ಚರಿತ್ರೆಯನ್ನು ತಿಳಿಯಬಹುದು.

ಗ್ರಾಮಪದ್ಧತಿಯ ಮೊದಲಿನ ಭಾಗದಲ್ಲಿ (ಇದನ್ನು ಪೌರಾಣಿಕ ಭಾಗ ಎಂದು ಕರೆಯಬಹುದು) ಅನೇಕ ಸ್ಥಳಗಳ ಪರಿಚಯ ಸಿಕ್ಕುತ್ತದೆ. ಗ್ರಾ$_1$ರಲ್ಲಿ ಈ ಕೆಳಗಿನ ಭೌಗೋಳಿಕ ಅಂಶಗಳನ್ನು ಕಾಣಿಸಲಾಗಿದೆ:

ಗೋದಾವರೀನದಿ, ಅಹಿಚ್ಛತ್ರ, ಸಹ್ಯಪರ್ವತ, ಮಹೇಂದ್ರಪರ್ವತ, ಕನ್ಯಾಕುಮಾರಿ, ಕೇರಳ, ವರಾಟ, ಮರಾಟ, ಕೊಂಕಣ, ಹೈವ, ತೌಳವ, ಕೇರಳ, ಗಂಗಾವಳಿ ನದಿ, ನೀಲೇಶ್ವರ ನದಿ, ನಾಗೂರು ಗ್ರಾಮ, ಮಟ್ಟಿನ ಗ್ರಾಮ, ಕುಶಸ್ಥಳ ಗ್ರಾಮ, ಸ್ವಾಷ್ಠಿ ಗ್ರಾಮ, ಗೋಕರ್ಣದೇಶ, ಕೋಟ, ಕಂದಾವರ ಹಾಗೂ ಶಿವಳ್ಳಿ.

ಗ್ರಾ$_2$ರಲ್ಲಿರುವ ಸ್ಥಳಗಳ ಹೆಸರುಗಳು: ಅಹಿಕ್ಷೇತ್ರ, ಶಿವಳ್ಳಿ, ಕೋಟ, ತುಳು, ಮಲೆಯಾಳ, ಹರಿಗ, ಜಯಂತಿಕಾ, ಬಾರ್ಕೂರು, ನಗರ. ಗ್ರಾ$_3$ರಲ್ಲಿ ಗಜಪುರ, ಕೋಟೇಶ್ವರ, ಸಾಲಿಗ್ರಾಮ, ವೇಣುಪುರ, ನಟಪುರ, ಶಿವಬೆಳ್ಳಿ, ನಿಟ್ಟೂರು, ತಾಳಿತೊಡೆ, ಮಂಗಳೂರು, ಬಾರಕೂರು, ಕುಕ್ಕೆ ಮತ್ತು ಮಜಿವೂರು ಇತ್ಯಾದಿ ಸ್ಥಳಗಳ ಹೆಸರನ್ನು ಕಾಣುತ್ತೇವೆ.

'ಗ್ರಾಮಪದ್ಧತಿ'ಯ ಕಡೆಯ ಭಾಗದಲ್ಲಿ ಬ್ರಾಹ್ಮಣಕುಲಗಳು ನೆಲಸಿದ ಮೂವತ್ತೆರಡು ಗ್ರಾಮಗಳು ಹಾಗೂ ಕೋಟ, ಶಿವಳ್ಳಿ ಇತ್ಯಾದಿ ಮುಖ್ಯ ಗ್ರಾಮಗಳ ಗಡಿವಿವರಗಳನ್ನು ನೀಡಲಾಗಿದೆ. ಗ್ರಾ$_3$ರಲ್ಲಿ ಶಿವಳ್ಳಿಯ ವಿವಿಧ ಅಧಿವಾಸಗಳಲ್ಲಿ ಬ್ರಾಹ್ಮಣರ ಜನಸಂಖ್ಯೆ ಇತಿಹಾಸದ ಅಧ್ಯಯನಕ್ಕೆ ಈ ವಿವರಗಳು ಪ್ರಯೋಜನ ಕಾರಿಯಾಗಿವೆ ಎಂದು ಹೇಳಿದರೆ ತಪ್ಪಾಗಲಾರದು.

ಈ ಮೂರು ಪ್ರತಿಗಳಲ್ಲಿ ಬ್ರಾಹ್ಮಣರು ನೆಲೆಸಿದ ಮೂವತ್ತೆರಡು ಗ್ರಾಮಗಳ ವಿವರಗಳನ್ನು ಕಾಣುತ್ತೇವೆ.

ಗ್ರಾ$_1$ರಲ್ಲಿ ಪಶ್ಚಿಮ ಗ್ರಾಮಗಳು: ತಾರೆವೂರು, ವರ್ಕಾಡಿ, ಮರಣೆ, ಕೊಳ್ಯನಾಡು, ಪಾಡಿ, ಕೂಡಲು, ಮೊಗೆಬೈಲು, ಮಿತ್ತನಾಡು, ನೀರುಮಾರ್ಗ, ಸೀಮಂತೂರು, ತೆನೆಕಳ, ಶಿವಬೆಳ್ಳಿ, ಬ್ರಹ್ಮಪುರ, ನೀಲಾವರ, ಕೂಟ ಮತ್ತು ಸ್ಕಂದಪುರ.

ಪೂರ್ವಗ್ರಾಮಗಳು: ಶ್ರೀಪಾಡಿ, ಒಡಿಲು, ನಾಳ, ಕಾರಂದೂರು, ಉಜಿರೆ, ಕುನ್ಯಮಾರ್ಗ, ಕೊಕ್ಕಡ, ರಾಮಿಂಜ, ಪುದೆ ಗ್ರಾಮ, ಬೆಳಪ್ಪ, ಐರ್ನಾಡು, ಇಡಕೆದು, ಕೆಮ್ಮಿಂಜ, ಪಾಡಿಂಜ, ಸಿರಿಯಾಡಿ ಮತ್ತು ಕುಡಿನಾಡಿ.

ಗ್ರಾ$_2$ರಲ್ಲಿ ಪಶ್ಚಿಮ ಗ್ರಾಮವಿಭಾಗದಲ್ಲಿ ತಾರೆವೂರನ್ನು ಕಾರೂರು ಎಂದೂ ತೆನೆಕಳವನ್ನು ಕನಕ್ಕಳವೆಂದೂ ಕೊಳ್ಯನಾಡನ್ನು ಕೊಳವಿನಾಡು ಎಂದೂ ಸ್ಕಂದಪುರವನ್ನು ಸ್ಕಂದಾವರ ಎಂದೂ ಕರೆಯಲಾಗಿದೆ. ಈ ಪ್ರತಿಯಲ್ಲಿ 'ಮೊಗೆಬೈಲ್' ಗ್ರಾಮದ ಬದಲಾಗಿ 'ಮೊಗ್ರಾಲು' ಎನ್ನುವ ಹೆಸರು ಕಾಣುತ್ತದೆ. ಗ್ರಾ$_2$ರಲ್ಲಿ ಪೂರ್ವಗ್ರಾಮ ವಿಭಾಗದಲ್ಲಿ ಕರೆಯ, ಕಾವಳ ಹಾಗೂ ಮಣಿಕಳ ಗ್ರಾಮಗಳನ್ನು ಹೆಸರಿಸಲಾಗಿದೆ. ಈ ಗ್ರಾಮಗಳು ಗ್ರಾ$_1$ರಲ್ಲಿ ಕಾಣುವುದಿಲ್ಲ. ಆದರೆ ಗ್ರಾ$_1$ರಲ್ಲಿ

ಕಾಣಿಸಲಾಗಿರುವ ಐರ್ನಾಡು, ಶಿರಿಯಾಡಿ ಮತ್ತು ಕುಡಿಪಾಡಿ ಗ್ರಾಮಗಳನ್ನು ಗ್ರಾ೨ರಲ್ಲಿ ಹೆಸರಿಸಿರುವುದಿಲ್ಲ. ಗ್ರಾ೨ರಲ್ಲಿ ಕಾರಂದೂರನ್ನು ಕಾರಂಜೂರು ಎಂದೂ ಕುನ್ಯಮಾರ್ಗವನ್ನು ಕುಞ್ಞಿಮಾರ್ಗವೆಂದೂ ರಾಮಿಂಜವನ್ನು ರಾಮಂಜೂರು ಎಂದೂ ಬೆಳಪವನ್ನು ಬೆಳವ್ಯ ಎಂದೂ ಪಾಮಿಂಜವನ್ನು ಪಾಲಿಂಜವೆಂದೂ ಕರೆಯಲಾಗಿದೆ.

ಗ್ರಾ೩ರಲ್ಲಿ ಹೆಸರಿಸಲಾಗಿರುವ ಎಲ್ಲ ಹದಿನಾರು ಪಶ್ಚಿಮ ಗ್ರಾಮಗಳನ್ನು ಕಾಣಬಹುದು. ಆದರೆ, 'ಮೊಗೆಬೈಲು' ಗ್ರಾಮದ ಬದಲು 'ಮೊಗನಾಡು' ಗ್ರಾಮದ ಹೆಸರನ್ನು ಕಾಣುತ್ತೇವೆ. ಈ ಪ್ರತಿಯಲ್ಲಿ ಕೊಟವನ್ನು ಗಜಪುರವೆಂದೂ ಸ್ಕಂದಪುರವನ್ನು ಸ್ಕಂದಗ್ರಾಮವೆಂದೂ ಹೆಸರಿಸಲಾಗಿದೆ. ಪಶ್ಚಿಮ ಗ್ರಾಮವಿಭಾಗದಲ್ಲಿ ಶ್ರೀಪಾಡಿಯನ್ನು ಸಿರ್ರಿಪಾಡಿ ಎಂದು ಕರೆಯಲಾಗಿದೆ.

ಒಟ್ಟಿನಲ್ಲಿ, 'ಗ್ರಾಮಪದ್ಧತಿ'ಯು ತುಳುನಾಡಿನ ಪ್ರಾಚೀನ ಇತಿಹಾಸವನ್ನು, ಮುಖ್ಯವಾಗಿ ಈ ಪ್ರದೇಶಕ್ಕೆ ಬ್ರಾಹ್ಮಣರ ಆಗಮನವನ್ನು, ಅವರ ನೆಲೆಗಳನ್ನು ತಿಳಿಸುವ ಒಂದು ಐತಿಹಾಸಿಕ ಮಹತ್ವವುಳ್ಳ ಚಿಕ್ಕ ಗ್ರಂಥ. ಈ ಗ್ರಂಥವು ಎಷ್ಟು ಜನಪ್ರಿಯವಾಗಿತ್ತೆಂಬುದಕ್ಕೆ ಅದರ ಹತ್ತಾರು ವಿಧದ ಪಾಠಾಂತರಪ್ರತಿಗಳೇ ಸಾಕ್ಷಿ. ತುಳುನಾಡಿನ ಬ್ರಾಹ್ಮಣರ ಮೂಲದ ಕುರಿತಾಗಿ ತಿಳಿಸುವ ಏಕೈಕ ಗ್ರಂಥ ಎನ್ನುವ ಕಾರಣಕ್ಕಾಗಿಯೂ ಗ್ರಾಮಪದ್ಧತಿಗೆ ಚಾರಿತ್ರಿಕ ಮಹತ್ವ ದೊರೆಯುತ್ತದೆ. ಹೊರಗಿನಿಂದ ಕರೆತರಲ್ಪಟ್ಟ ಬ್ರಾಹ್ಮಣರಿಗೆ ಯಾವ ರೀತಿ ಇಲ್ಲಿ ನೆಲೆಗಳನ್ನು ಕಲ್ಪಿಸಲಾಯಿತೆಂದು ಸವಿವರವಾಗಿ ತಿಳಿಸುವುದರಿಂದ ಇಲ್ಲಿ ನೆಲೆನಿಂತ ಬ್ರಾಹ್ಮಣರ ಅಧಿಕಾರವ್ಯಾಪ್ತಿಯನ್ನು ಸಹ ಈ ಗ್ರಂಥದಿಂದ ತಿಳಿಯಬಹುದು. ಇತರ ಕಡೆಗಳಲ್ಲಿರುವ ಬ್ರಾಹ್ಮಣರಿಗಿಂತ ವಿಭಿನ್ನವಾದ ಕುಲನಾಮಗಳು ತುಳುನಾಡಿನ ಬ್ರಾಹ್ಮಣರಿಗೆ ಹೇಗೆ ಲಭ್ಯಿಸಿತೆಂಬುದನ್ನು ತಿಳಿಯಲು ಕೂಡ ಈ ಗ್ರಂಥ ಉಪಯುಕ್ತವಾಗಿದೆ. ಒಂದು ಸ್ಥಳದ ಹೆಸರಿನಿಂದಲೇ ಅಲ್ಲಿ ನೆಲೆನಿಂತ ಬ್ರಾಹ್ಮಣರಿಗೆ ಕುಲನಾಮ ಪ್ರಾಪ್ತವಾದುದು ಬಹುಶಃ ಬೇರೆಲ್ಲೂ ಸಿಕ್ಕದ ಒಂದು ವಿಶೇಷ ಸಂಗತಿ. ಈ ಎಲ್ಲ ಕಾರಣಗಳಿಂದಾಗಿ ತುಳುನಾಡಿನ ಬ್ರಾಹ್ಮಣರ ಕುರಿತಾಗಿ, ಅವರ ಕುಲನಾಮಗಳ ಕುರಿತಾಗಿ, ಅವರ ಅಧಿಕಾರವ್ಯಾಪ್ತಿಯನ್ನು ಕುರಿತಾಗಿ ತಿಳಿಯಲು ಅತ್ಯುಪಯುಕ್ತವಾದ 'ಗ್ರಾಮಪದ್ಧತಿ'ಯು ಒಂದು ಅಮೂಲ್ಯ ಕೃತಿ.